ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 17 ಏಪ್ರಿಲ್ 24, 1983 ಬೆಲೆ 60 ಪೈಸೆ

ಸಿ. ಐ. ಟಿ. ಯು. ೫ನೇ ಸಮ್ಮೇಳನ

ದೇಶದ ಕಾರ್ಮಿಕರೇ ಎದ್ದೇಳಿ! ಚರಿತ್ರಾರ್ಹ ಜವಾಬ್ದಾರಿ ಪೂರೈಸಲು ಮುಂದಾಗಿರಿ!!

"ಬಿಕ್ಕಟ್ಟು, ನಿರುದ್ಯೋಗ, ಜನತೆಯ ಹಿತದ ಸಲುವಾಗಿ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ನೈಪುಣ್ಯತೆ ಇವುಗಳ ಕುರಿತು ಸ್ಪಷ್ಟ ಚಿತ್ರವನ್ನು ತಯಾರಿಸಿ, ಜನರ ಮುಂದಿಟ್ಟರೆ ನಮ್ಮ ಚಳುವಳಿಯನ್ನು ಮುಂದಕ್ಕೊಯ್ಯಲು ಸಾಧ್ಯವಾಗುತ್ತದೆ. ಸರ್ಕಾರದ ಕಾರ್ಮಿಕ ಮತ್ತು ಆರ್ಥಿಕ ನೀತಿಯಲ್ಲಿ ನಾವು ತುರ್ತಾಗಿ ಮಧ್ಯ ಪ್ರವೇಶಿಸುವುದು ಅತ್ಯಗತ್ಯ. ಇದನ್ನು ಅರ್ಥಮಾಡಿಕೊಳ್ಳಬೇಕು. ಇದರ ಸಲುವಾಗಿ ಇಡೀ ಕಾರ್ಮಿಕ ವರ್ಗ ಒಂದು ತಿಳುವಳಿಕೆಯಿಂದ ತನ್ನ ಶಕ್ತಿಯನ್ನೆಲ್ಲಾ ಕ್ರೋಢೀಕರಿಸುವುದು ಅತ್ಯಗತ್ಯ.

"ಕಾರ್ಮಿಕರು ತಮ್ಮ ಸ್ವಂತ ಆರ್ಥಿಕ ಬೇಡಿಕೆಗಳಿಗಾಗಿಯಷ್ಟೇ ಹೋರಾಡದೆ ಎಲ್ಲ ನಾಗರೀಕರ ಪರವಾಗಿ ಇಡೀ ಸಮಾಜದ ಬದಲಾವಣೆಗಾಗಿ ಹೋರಾಡುವುದು ಅತ್ಯಗತ್ಯ. ಆದ್ದರಿಂದ ದೇಶದ ಕಾರ್ಮಿಕರೇ ಎದ್ದೇಳಿ, ಚರಿತ್ರಾರ್ಹ ಜವಾಬ್ದಾರಿಯನ್ನು ಪೂರೈಸಲು ಮುಂದಾಗಿರಿ" ಎಂದು ಘೋಷಿಸಿದವರು ಕಾಮ್ರೇಡ್ ಬಿ. ಟಿ. ರಣದಿವೆಯವರು. ಏ. 13 ರಂದು ಕಾನಪುರದಲ್ಲಿ ಪ್ರಾರಂಭವಾದ 5ನೇ ಅಖಿಲ ಭಾರತ ಸಿ. ಐ. ಟಿ. ಯು. ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ.

ಬಂಡವಾಳಶಾಹಿ-ಭೂಮಾಲಕ ಪರ ಕಾಂಗ್ರೆಸ್ ಸರ್ಕಾರ ಹಲವಾರು ರೀತಿಯಲ್ಲಿ ದಬ್ಬಾಳಿಕೆ ನಡೆಸುತ್ತಿರುವಾಗ, ಶೋಷಣೆ ಮಾಡುತ್ತಿರುವಾಗ, ಹಕ್ಕು ಬಾಧ್ಯತೆಗಳನ್ನು ಮೊಟಕುಗೊಳಿಸುತ್ತಿರುವಾಗ ಅವುಗಳ ವಿರುದ್ಧ ನಮ್ಮ ಪ್ರತಿಭಟನೆ ಎಂದಿಗೂ ಸಾಲದು. ಬಲವಾದ ಪ್ರತಿಭಟನೆ ಸಂಘಟಿಸಲ್ಪಡುವುದು ಅತ್ಯಗತ್ಯವೆಂದು ಎಚ್ಚರಿಸಿದರು.

ಇಡೀ ಭಾರತ ದೇಶದಲ್ಲೇ ಅತ್ಯಂತ ಹಿಂದುಳಿದ ರಾಜ್ಯ ಉತ್ತರ ಪ್ರದೇಶ. ಅತಿ ಹೆಚ್ಚು ಜನಸಂಖ್ಯೆ ಇರುವುದು ಕೂಡ ಇದೇ ಪ್ರಾಂತದಲ್ಲಿ. ಕಾಂಗ್ರೆಸ್‌ನ 35 ವರ್ಷಗಳ ಆಡಳಿತದಲ್ಲಿ ವರೋಡೆಕೋರರ, ಅತಿ ದೊಡ್ಡ ಭೂಮಾಲಕರ ನೆಲೆಬೀಡಾಗಿರುವುದು ಉತ್ತರ ಪ್ರದೇಶ. ದೀಪ, ರಸ್ತೆ, ಉದ್ಯೋಗವಿಲ್ಲದ ಹಳ್ಳಿಗಳಿಂದ ತುಂಬಿದೆ. ಭೂಸುಧಾರಣೆಯ ಗಂಧವೇ ಇಲ್ಲ. ನಿರ್ಭಯದಿಂದ ಸಾಮಂತಶಾಹಿ ಪದ್ಧತಿ ಮೆರೆಯುತ್ತಿದೆ

(8ನೇ ಪುಟ ನೋಡಿ)

ಸಿ. ಐ. ಟಿ. ಯು. ಐದನೇ ಸಮ್ಮೇಳನ

ಸಮರ್ ಮುಖರ್ಜಿ ನೂತನ ಪ್ರ. ಕಾರ್ಯದರ್ಶಿ

ಏಪ್ರಿಲ್ ೧೩ ರಿಂದ ೧೭ ರವರೆಗೆ ಕಾನ್ಪುರದಲ್ಲಿ ನಡೆದ ಐದನೇ ಅಖಿಲ ಭಾರತ ಸಿ. ಐ. ಟಿ. ಯು. ಸಮ್ಮೇಳನವು ಕಾ. ಸಮರ್ ಮುಖರ್ಜಿ ಅವರನ್ನು ಸಿ.ಐ.ಟಿ.ಯು. ನ ನೂತನ ಪ್ರಧಾನ ಕಾರ್ಯದರ್ಶಿಯನ್ನಾಗಿ ಚುನಾಯಿಸಿದೆ. ಇದುವರೆಗೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾಮ್ರೇಡ್ ಪಿ. ರಾಮಮೂರ್ತಿ ಅವರು ತಮ್ಮ ಅನಾರೋಗ್ಯದ ಕಾರಣದಿಂದಾಗಿ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟು ಸಿ.ಐ.ಟಿ.ಯು.ವಿನ ಉಪಾಧ್ಯಕ್ಷರಾಗಿ ಮುಂದುವರೆಯಲಿದ್ದಾರೆ.

ಕಾಂ. ಬಿ. ಟಿ. ರಣದಿವೆ ಅವರನ್ನು ಸಮ್ಮೇಳನವು ಮತ್ತೊಂದು ಅವಧಿಗೆ ಅಧ್ಯಕ್ಷರನ್ನಾಗಿ ಚುನಾಯಿಸಿದೆ.

ಕಾ. ಇ. ಬಾಲಾನಂದನ್ ಅವರು ನೂತನ ಖಜಾಂಚಿಯಾಗಿ ಚುನಾಯಿಸಲ್ಪಟ್ಟಿದ್ದಾರೆ. ಇತರ ಪದಾಧಿಕಾರಿಗಳು ಈ ಕೆಳಗಿನಂತಿದ್ದಾರೆ.

ಉಪಾಧ್ಯಕ್ಷರುಗಳು: ಕಾ|| ಜ್ಯೋತಿಬಸು, ಕಾ|| ಮನೋರಂಜನ್ ರಾಯ್, ಕಾ|| ಮಹಮದ್ ಇಸ್ಮಾಯಿಲ್, ಕಾ|| ಸುಧೀನ್ ಕುಮಾರ್, ಕಾ|| ಎಸ್. ವೈ. ಕೊಲ್ಹಾಟ್‌ಕರ್, ಕಾ|| ಸುಶೀಲಾ ಗೋಪಾಲನ್, ಕಾ|| ಸಿ. ಕಣ್ಣನ್, ಕಾ|| ಕೆ. ರಮಣಿ ಕಾ|| ಎನ್. ಪ್ರಸಾದ್‌ರಾವ್, ಮತ್ತು ಕಾ|| ಫುರ್‌ಸಹಾಯ್ ಸಿಂಗ್.

ಕಾರ್ಯದರ್ಶಿಗಳು: ಕಾ. ಎಂ. ಕೆ. ಪಂಧೆ, ಕಾ. ನೃಸಿಂಗ ಚಕ್ರವರ್ತಿ, ಕಾ. ಕಮಲ್‌ಸರ್ಕಾರ್, ಕಾ. ನಿರೇನ್‌ಘೋಷ್, ಕಾ. ಎಂ. ಎಂ. ಲಾರೆನ್ಸ್, ಕಾ. ಪಿ. ಕೆ. ಗಂಗೂಲಿ. ಇವರಲ್ಲದೆ ೩೨೧ ಸದಸ್ಯರ ಜನರಲ್ ಕೌನ್ಸಿಲ್ ಅನ್ನು ಚುನಾಯಿಸಲಾಗಿದೆ.

ಸಂಪಾದಕೀಯ :

ಬಂಗಾರಪ್ಪನವರ ಒಡಕು ನೀತಿ

ದೇಶದ ಅಥವಾ ರಾಜ್ಯದ ಮಟ್ಟದಲ್ಲಿರುವ ಯಾವುದೇ ಪಕ್ಷಕ್ಕಾದರೂ ರಾಜಕೀಯ ಪಕ್ಷವೆಂದೆನಿಸಿಕೊಳ್ಳಬೇಕಾಗಿದ್ದರೆ ಅದಕ್ಕೆ ಸ್ಪಷ್ಟ ರಾಜಕೀಯ ನಿಲುವು ಇರುವುದು ಅತ್ಯಗತ್ಯ. ಆ ದೃಷ್ಟಿಯಲ್ಲಿ ಬಂಗಾರಪ್ಪನವರ ಕ್ರಾಂತಿರಂಗ ಪ್ರಾರಂಭದಿಂದಲೂ ಒಂದೇ ನಿರ್ದಿಷ್ಟ ನಿಲುವಿಗೆ ಅಂಟಿಕೊಂಡಿದ್ದರೆ ಅಭ್ಯಂತರವಿರುತ್ತಿರಲಿಲ್ಲ. ಆದರೆ ಅಧಿಕಾರವೇ ಪ್ರಾಧಾನ್ಯವೆಂಬ ಗುರಿ ಇದ್ದವರಿಗೆಲ್ಲ ಇತರ ವಿಷಯ ಗೌಣ. ದೇವರಾಜ ಅರಸರು ದಿವಂಗತರಾದ ಕೂಡಲೇ ಬಂಗಾರಪ್ಪನವರು ಅವರ ಕ್ರಾಂತಿರಂಗದ ಅಧ್ಯಕ್ಷ ಸ್ಥಾನ ಬಯಸಿ ಗೊಂದಲ ಉಂಟು ಮಾಡಿದರು. ಚುನಾವಣೆ ಬಂದಾಗ ಜನತಾ-ಕ್ರಾಂತಿರಂಗ ಸೇರಿ ಒಂದೇ ಚುನಾವಣೆಯ ಚಿನ್ಹೆಯಲ್ಲಿ ಸ್ಪರ್ಧಿಸಿ ಗೆದ್ದರು. ಅನಂತರ ಎರಡೂ ಪಾರ್ಟಿ ಸೇರಬೇಕೆಂಬ ನಿರ್ಣಯದಲ್ಲೂ ಸಹ ಮತದವರಾಗಿದ್ದರು. ತಮ್ಮನ್ನು ಶಾಸಕ ಪಾರ್ಟಿಯ ಮುಖಂಡನನ್ನಾಗಿ ಆರಿಸಲಿಲ್ಲೆಂಬ ಒಂದೇ ಕಾರಣದಿಂದ, ಸರ್ವಾನುಮತದ ಅಭಿಪ್ರಾಯವನ್ನು ಧಿಕ್ಕರಿಸಿ ಜಾತಿ ಪ್ರಶ್ನೆಯನ್ನೆತ್ತಿದ್ದರು. ಅಂದಿನಿಂದ ಪ್ರಾರಂಭವಾದ ಅವರ ಪ್ರತ್ಯೇಕತಾ ಮನೋಭಾವನೆ ಅವರನ್ನು ಜನತಾ ಸರ್ಕಾರದ ವಿರುದ್ಧವಾಗಿ ಇಂದಿರಾ ಕಾಂಗ್ರೆಸ್ಸಿನ ಕೊಂಪೆಯಲ್ಲಿ ಮುಳುಗುವಂತೆ ಮಾಡುತ್ತಿದೆ. ಆದರೆ ಜನರ ಒತ್ತಡವು ಅವರ ಮೇಲೆ ಕಡಿವಾಣ ಹಾಕುತ್ತಿದೆಯೆಂಬ ಸಂಗತಿಯೂ ಎದ್ದು ಕಾಣುತ್ತಿದೆ. ಆದ್ದರಿಂದ ಈಗ ಎಲ್ಲರಿಗೂ ಅತಿ ಸುಲಭದ ಕೈಗೊಂಬೆಯಾಗಿ ಲಭ್ಯವಾಗುತ್ತಿರುವ ದುರ್ಬಲ ವರ್ಗದವರಿಗೆ, ಹಿಂದುಳಿದವರಿಗೆ ಪ್ರಾತಿನಿಧ್ಯವೆಂಬುದನ್ನೇ ಪ್ರಾಧಾನ್ಯವಾಗಿ ಹಿಡಿದುಕೊಂಡು ರಾಮಕೃಷ್ಣ ಹೆಗಡೆ ಸರ್ಕಾರದ ವಿರುದ್ಧ ಕೆಲಸ ಮಾಡುವ ದೃಢ ನಿರ್ಧಾರದಲ್ಲೇ ಹೊರಟಿದ್ದಾರೆ ಬಂಗಾರಪ್ಪನವರು. ಹೆಗ್ಗಡೆ ಸರ್ಕಾರ ಉರುಳಿಸಲು ತಾನು ಕಾರಣನಾಗುವುದಿಲ್ಲೆಂದು ಹೇಳುತ್ತಾ, ಮೊನ್ನೆ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಸ್ವತಂತ್ರರಾಗಿ ಸ್ಪರ್ಧಿಸಿದ್ದ ಕಾಂಗ್ರೆ ಅಭ್ಯರ್ಥಿಗಳಿಗೆ ಮತ ಹಾಕಿಸಿದ್ದರು. ಈಗ ಕನಕಪುರದಲ್ಲಿ ರಾಮಕೃಷ್ಣ ಹೆಗ್ಗಡೆಯವರು ಸ್ಪರ್ಧಿಸುತ್ತಿದ್ದು, ಅವರು ಆರಿಸಿ ಬರುವ ಅಗತ್ಯತೆಯನ್ನು ತಾವು ತಿಳಿದುಕೊಂಡಿದ್ದರೂ ಕೂಡ, ಅವರನ್ನು ವಿರೋಧಿಸುವ ನಿರ್ಣಯ ಕೈಗೊಳ್ಳುತ್ತಿರುವುದನ್ನು ನೋಡುವಾಗ ಬಂಗಾರಪ್ಪನವರು ಮತ್ತೆ ಇಂದಿರಾ ಕಾಂಗ್ರೆಸ್ಸಿನ ಅಪೇಕ್ಷೆಯನ್ನು ಅಂದರೆ ಕರ್ನಾಟಕದಲ್ಲಿ ಜನತಾ ಸರ್ಕಾರವನ್ನು ಉರುಳಿಸುವ ಒಳಸಂಚಿನಲ್ಲಿ ತಾವೂ ಸಹಭಾಗಿಗಳಾಗಿದ್ದಾರೆಂಬುದನ್ನು ಬಹಿರಂಗವಾಗಿಯೇ ತೋರ್ಪಡಿಸುತ್ತಿರುವುದು ಕಂಡು ಬರುತ್ತಿದೆ. ಎರಡು ತರದ ಎರಡು ನಾಲಗೆಯ ಬಂಗಾರಪ್ಪನವರ ಹೇಳಿಕೆಗಳು ಬಹಳ ಅಪಾಯಕಾರಿ. ಕರ್ನಾಟಕದಲ್ಲಿ ಮತ್ತೊಮ್ಮೆ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬರಬಾರದೆಂಬ ಕನ್ನಡಿಗರ ಆಕಾಂಕ್ಷೆಯನ್ನು ಬಂಗಾರಪ್ಪನವರು ಮಣ್ಣುಪಾಲು ಮಾಡುವಂತೆ ಕಂಡು ಬರುತ್ತಿದೆ. ಈ ಪ್ರವೃತ್ತಿಯನ್ನು ಬಂಗಾರಪ್ಪನವರು ಬಿಟ್ಟು ಕೊಡಬೇಕೆಂದು ಕೇಳಿಕೊಳ್ಳುತ್ತಿರುವಾಗಲೇ, ಜನತಾ ಸರ್ಕಾರವನ್ನು ಉರುಳಿಸುವ ಹಠವನ್ನು ಮುಂದುವರಿಸಿದ್ದೇ ಆದರೆ ಅದರ ವಿರುದ್ಧ ಹೋರಾಡಬೇಕಾದೀತೆಂದು ಎಚ್ಚರಿಕೆಯನ್ನು ನೀಡಲಿಚ್ಛಿಸುತ್ತೇವೆ.

ಎ. ಕೆ. ಸುಬ್ಬಯ್ಯ ಮತ್ತು ಆರ್. ಎಸ್. ಎಸ್.

ಕರ್ನಾಟಕ ಭಾರತೀಯ ಜನತಾ ಪಕ್ಷದಲ್ಲಿ ಆರ್. ಎಸ್. ಎಸ್. ಗುಂಪಿನ ಮೇಲ್ಗೈಯಾಗಿದೆ. ಅಧ್ಯಕ್ಷ ಸ್ಥಾನದಿಂದ ಸುಬ್ಬಯ್ಯನವರನ್ನು ತೆಗೆದು ಹಾಕಲಾಗಿದೆ. ಆರ್. ಎಸ್. ಎಸ್.ನ ಒಳಸಂಚಿನಿಂದಲೇ ತಾನು ಸೋತಿದ್ದೇನೆಂದು ಸುಬ್ಬಯ್ಯನವರು ಬಹಿರಂಗವಾಗಿಯೇ ಆರೋಪ ಹೊರಿಸಿದ್ದಾರೆ. ಆರ್. ಎಸ್. ಎಸ್. "ಗುರು"ಗಳ ಹಿಡಿತದಲ್ಲಿ ಬಿ. ಜೆ. ಪಿ. ಇರಬೇಕೋ ಅಥವಾ ಒಂದು ರಾಜಕೀಯ ಪಾರ್ಟಿಯಾಗಿ ಉಳಿಯಬೇಕೋ ಎಂಬ ಪ್ರಶ್ನೆ ಪ್ರಮುಖವಾಗಿದೆಯೆಂದೂ, ಬಿ. ಜೆ. ಪಿ.ಯು ಹಿಂದೂ ಸಂಘಟನೆ ಅಲ್ಲವೆಂದೂ, ಆರ್. ಎಸ್. ಎಸ್. ಅಂಥ ಸಂಘಟನೆಗಳಲ್ಲಿ ಒಂದಾಗಿರಬಹುದೆಂದೂ ಹೇಳಿ ಅಧಿಕಾರದ ಸಲುವಾಗಿ ಆರ್. ಎಸ್. ಎಸ್.ನವರು ಹಲವಾರು ಸಲ ಒಳಸಂಚು ನಡೆಸುತ್ತ ಬಂದಿದ್ದರೆಂದೂ ಆರೋಪ ಹೊರಿಸಿದ್ದಾರೆ.

ಆರ್. ಎಸ್. ಎಸ್. ಕುರಿತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಮಾಡುತ್ತ ಬಂದ ಆರೋಪವನ್ನೇ ಸುಬ್ಬಯ್ಯನವರು ಸಮ

8ನೇ ಪುಟ ನೋಡಿ

ಆರ್. ಚಂದ್ರ

ಆರ್ಥಿಕ ಸಮೀಕ್ಷೆ :

ಕೇಂದ್ರ ಮುಂಗಡ ಪತ್ರ: ೧೯೮೩-೮೪ ಹೊರಲಾರದ ಕರಭಾರ

IMF ಶರತ್ತುಗಳು

1983-84ರ ಕೇಂದ್ರ ಮುಂಗಡ ಪತ್ರ ಸಂಪನ್ಮೂಲ, ಉತ್ಪಾದನೆ, ಉಳಿತಾಯ, ಬಂಡವಾಳ ಹೂಡುವಿಕೆ, ರಫ್ತು ಹೆಚ್ಚಿಸುವ ಮತ್ತು ಅನವಶ್ಯಕ ವೆಚ್ಚಗಳನ್ನು ಹಾಗೂ ಹಣದುಬ್ಬರವನ್ನು ನಿಯಂತ್ರಿಸುವ ಬಹು ಮುಖ್ಯ ಉದ್ದೇಶಹೊಂದಿದೆ ಎಂದು ಅರ್ಥ ಮಂತ್ರಿ ಪ್ರಣಬ್‌ಮುಖರ್ಜಿ ಸಂಸತ್ತಿನಲ್ಲಿ ಘೋಷಿಸಿದ್ದಾರೆ. ಆದರೆ ಒಂದೇ ಉಸಿರಿನಲ್ಲಿ ಈ ಎಲ್ಲಾ ಉದ್ದೇಶಗಳನ್ನು ಸಾಧಿಸುವುದು ಅಸಾಧ್ಯ ಎಂದು ಸಾಮಾನ್ಯರಿಗೂ ತಿಳಿದೀತು. ಅಲ್ಲದೆ, ಘೋಷಿತ ಉದ್ದೇಶಗಳಲ್ಲಿ ಕೆಲವು ಪರಸ್ಪರ ವಿರುದ್ಧವಾಗಿರುವುದನ್ನು ಗಮನಿಸಬಹುದು. ಮುಂಗಡ ಪತ್ರದ ಮೂಲಕ ಹಾಗೂ ಅದಕ್ಕಿಂತ ಮೊದಲು ಆಡಳಿತ ನಿರ್ದೇಶನಗಳ ಮೂಲಕ ಅವಶ್ಯಕ ವಸ್ತುಗಳ, ಸೇವೆಗಳ ದರಗಳನ್ನು ಏರಿಸಿದುದೂ, ತೆರಿಗೆಗಳನ್ನು ಏರಿಸಿದುದೂ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ (IMF) ಕಠಿಣ ಷರತ್ತುಗಳನ್ನು ಪಾಲಿಸುವುದೇ ಮುಖ್ಯ ಉದ್ದೇಶವಾಗಿತ್ತೆಂದೂ ಸ್ಪಷ್ಟವಾಗುವುದು. ಇತರ ಘೋಷಿತ ಉದ್ದೇಶಗಳೆಲ್ಲವೂ ಗೌಣ.

ಆಂತರಿಕ ಆರ್ಥಿಕ ದುಃಸ್ಥಿತಿಯನ್ನು ಹೋಗಲಾಡಿಸಲು, ವಿದೇಶಿ ವ್ಯಾಪಾರದ ಕೊರತೆಯನ್ನು ನೀಗಿಸಲು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ರೂ. 5500 ಕೋಟಿಯಷ್ಟು ಬೃಹತ್ ಪ್ರಮಾಣದ ಸಾಲ ಪಡೆಯಲು ಎರಡು ವರ್ಷಗಳ ಹಿಂದೆ ಇಂದಿರಾ ಸರ್ಕಾರ ಒಪ್ಪಂದ ಮಾಡಿಕೊಂಡಿತು. 1983–84ರಲ್ಲಿ ಈ ಸಾಲದ ಕಡೆಯ ಕಂತಾಗಿ ರೂ. 2300 ಕೋಟಿ ಭಾರತ ಪಡೆಯಬೇಕಾಗಿದೆ. ದೇಶದಲ್ಲಿ ಬ್ಯಾಂಕುಗಳ ಒಟ್ಟು ಸಾಲ ನೀಡಿಕೆಯ ಮೇಲೆ, ಸರಕಾರ ಬ್ಯಾಂಕುಗಳಿಂದ ವಿದೇಶಿ ಮತ್ತು ಮಾರುಕಟ್ಟೆಗಳಿಂದ ಪಡೆಯುವ ಸಾಲಗಳ ಮೇಲೆ ಅಂತರಾಷ್ಟ್ರೀಯ ಹಣಕಾಸು ಕಠಿಣ ನಿರ್ಬಂಧನೆಗಳನ್ನು ಹೇರಿದೆ. ಇವುಗಳನ್ನು ಮೀರಿದರೆ, ಕಡೆಯ ಕಂತಿನ ಸಾಲ ಸಿಗಲಾರದು!

ಸಂಸತ್ತಿಗೆ ಅಗೌರವ

1982-83ರ ಕಡೆಯ ಕಾಲದಲ್ಲಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಕಠಿಣ ಷರತ್ತುಗಳನ್ನು ಅವಸರವಾಗಿ ಪಾಲಿಸಲು ಸರಕಾರ ಹಲವಾರು ತುರ್ತು ಕ್ರಮಗಳನ್ನು ಕೈಗೊಂಡಿತು. ರಾಜ್ಯ ಸರಕಾರಗಳು ತಮ್ಮ ಓವರ್ ಡ್ರಾಫ್ಟ್ ಹಣವನ್ನು ಕೂಡಲೇ ಕೇಂದ್ರ ಸರ್ಕಾರಕ್ಕೆ ಮರಳಿಸಬೇಕೆಂದೂ, ಸಾರ್ವಜನಿಕ ಸಂಸ್ಥೆಗಳು ಬ್ಯಾಂಕುಗಳಿಂದ ಪಡೆದ ಸಾಲವನ್ನು ಕೂಡಲೇ ಮರುಪಾವತಿ ಮಾಡಬೇಕೆಂದೂ, ಈ ಸಂಸ್ಥೆಗಳು ತಮ್ಮ ಲಾಭಗಳಿಕೆಯನ್ನು ವರ್ಷಾಂತ್ಯದ ಮುಂಚಿತವಾಗಿಯೇ ಸರಕಾರಕ್ಕೆ ಸಲ್ಲಿಸಬೇಕೆಂದೂ ಆದೇಶಗಳನ್ನು ನೀಡಲಾಯಿತು. ಇಷ್ಟೆಲ್ಲಾ ಕ್ರಮಗಳು ಸಾಲದಾಗಿ, ಸರಕಾರದ ಆಯವ್ಯಯದ ಕೊರತೆಯನ್ನು ನೀಗಿಸಲು 1983-84ರ ಮುಂಗಡ ಪತ್ರ ಸಂಸತ್ತಿನಲ್ಲಿ ಮಂಡಿಸುವ ಮೊದಲೇ ಪೆಟ್ರೋಲಿಯಂ(ರೂ. 800 ಕೋಟಿ) ಅಂಚೆ–ತಂತಿ (ರೂ. 70 ಕೋಟಿ), ರೈಲ್ವೆ ಸಾರಿಗೆ ಪ್ರಯಾಣ ದರಗಳನ್ನೂ (ರೂ. 490 ಕೋಟಿ), ಸಿಗರೇಟಿನ ಮೇಲಿನ ತೆರಿಗೆಯು ಮತ್ತು ಸಹಕಾರಿ ಸುಂಕಗಳ ದರಗಳನ್ನೂ (ರೂ. 540 ಕೋಟಿ) ಗಣನೀಯವಾಗಿ ಏರಿಸಲಾಯಿತು. ಪರಿಣಾಮವಾಗಿ, ಮುಂಗಡ ಪತ್ರದಲ್ಲಿ ರೂ. 716 ಕೋಟಿ ಹೊಸ ತೆರಿಗೆಗಳ ಸೂಚನೆಗಳಿದ್ದರೆ, ಆದರ ಮೊದಲೇ ರೂ. 2100 ಕೋಟಿ ಆದಾಯ ಬರುವ ತೆರಿಗೆಗಳನ್ನು ಹೇರಲಾಗಿತ್ತು! ಅಂದರೆ, ಇಂದಿರಾ ಸರಕಾರಕ್ಕೆ ತಾನು ಜನತೆಯ ಓಟು ಗಿಟ್ಟಿಸಿಕೊಂಡು ಅಧಿಕಾರಕ್ಕೆ ಬಂದಿರುವ ಸಂಸತ್ತಿನ ಗೌರವಕ್ಕಿಂತಲೂ, ತನಗೆ ಸಾಲ ಕೊಟ್ಟ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಒತ್ತಾಯ, ನಿರ್ದೇಶನ, ನಿಯಂತ್ರಣಗಳೇ ಹೆಚ್ಚು ಮುಖ್ಯವಾದವು!

ಅನಿಯಂತ್ರಿತ ಕೊರತೆ

ಇಷ್ಟೆಲ್ಲಾ ಕರಭಾರ ಹೇರಿಯೂ 1982-83ರಲ್ಲಿನ ಕೇಂದ್ರ ಆಯವ್ಯಯದ ಕೊರತೆ ರೂ. 1945 ಕೋಟಿಯಷ್ಟಾಗಿದ್ದು, 1983-84ರಲ್ಲಿನ ಕೊರತೆ ರೂ. 1555 ಕೋಟಿಯಷ್ಟಾಗುವುದೆಂದು ನಿರೀಕ್ಷಿಸಲಾಗಿದೆ. ಆರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ (1980-85) ಒಟ್ಟು ಕೊರತೆ ರೂ. 5000 ಕೋಟಿಗಿಂತ ಮೀರಬಾರದೆಂದಿದ್ದರೂ, ಮೊದಲ ಮೂರು ವರ್ಷಗಳಲ್ಲಿಯೇ (1980–83) ಒಟ್ಟು ಕೊರತೆ ರೂ. 5914 ಕೋಟಿಯಷ್ಟಾಗಿದೆ! ಮುಂದಿನ ಎರಡು ವರ್ಷಗಳಲ್ಲಿನ ಕೊರತೆಗಳೂ ಸೇರಿದಂತೆ ಯೋಜನಾ ಅವಧಿಯ ಒಟ್ಟು ಕೊರತೆ ರೂ. 10,000 ಕೋಟಿಯಷ್ಟಾಗುವ ಭಯವಿದೆ! ಕೊರತೆಯನ್ನು ನೀಗಿಸಲು ಹಣಸೃಷ್ಟಿ ಮಾಡಿ ಚಲಾವಣೆಗೆ ಬಿಡುವ ಮೂಲಕ ಉತ್ಪಾದನೆಗಿಂತ ಹಣದ ಚಲಾವಣೆ ಹೆಚ್ಚಿ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರ ಉಂಟಾಗುವುದು. ಪರಿಣಾಮವಾಗಿ ರೂಪಾಯಿಯ ಗ್ರಾಹಕ ಶಕ್ತಿ ಕ್ಷಯಿಸುವುದು. ಈಗಾಗಲೇ 1960-61ಕ್ಕೆ ಹೋಲಿಸಿದರೆ, ರೂಪಾಯಿಯ ಬೆಲೆ 20 ಪೈಸೆ ಗಿಳಿದಿದೆ.

ರೂಪಾಯಿಯ ಬೆಲೆ ಕಡಿಮೆ ಆಗುವುದೆಂದರೆ, ಜನಸಾಮಾನ್ಯರ ಆದಾಯದ ಗ್ರಾಹಕಶಕ್ತಿ ಕುಸಿದಂತೆ. ಅರ್ಥಾತ್, ಕೃತಕ ಹಣಸೃಷ್ಟಿ ಜನಸಾಮಾನ್ಯರ ಮೇಲೆ ಅನ್ಯಾಯವಾಗಿ ಅಪ್ರತ್ಯಕ್ಷ ತೆರಿಗೆಯನ್ನು ಹೇರುವ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಇನ್ನೊಂದು ವಿಧಾನ. ಆಸ್ತಿ, ಆದಾಯಗಳ ಹಂಚಿಕೆಯ ಅಸಮಾನತೆಗೆ ಪ್ರಬಲ ಕಾರಣ ಜನಸಾಮಾನ್ಯರನ್ನು ಹೀರಿ, ಹಿಂಡಿ, ಹಿಪ್ಪೆಯಾಗಿಸಿ, ಆಸ್ತಿವಂತ ಶ್ರೀಮಂತರನ್ನು ಕೊಬ್ಬಿಸಿ, ಉಬ್ಬಿಸುವ ಪ್ರಬಲ ಅಸ್ತ್ರ. ತೆರಿಗೆಯು ಅವರವರ ಆಸ್ತಿ, ಆದಾಯಗಳ ಆಧಾರದಲ್ಲಿ ಕೊಡುವ ಸಾಮರ್ಥ್ಯಕ್ಕನುಗುಣವಾಗಿ ಇರಬೇಕಾದುದು ಸಾಮಾಜಿಕ ನ್ಯಾಯ. ಆದರೆ, ಅಪ್ರತ್ಯಕ್ಷ ತೆರಿಗೆ–ಮುಖ್ಯವಾಗಿ ಕೊರತೆ ಹಣಸೃಷ್ಟಿ ಸಾಂಕ್ರಾಮಿಕ ರೋಗದಂತೆ ಕೊಡುಕೊಳ್ಳುವ ತಾರತಮ್ಯವಿಲ್ಲದೆ ಜನಸಾಮಾನ್ಯರ ಮೇಲೆ ದುಷ್ಪರಿಣಾಮ ಉಂಟು ಮಾಡುವುದು.

ಹೊರಲಾರದ ಕರಭಾರ

ಅಂಚೆ-ತಂತಿಗಳ ದರಗಳ ಏರಿಕೆಯ ಹೊರೆಯು ಹೆಚ್ಚಾಗಿ ಜನಸಾಮಾನ್ಯರ ಮೇಲೆಯೇ ಬೀಳುವುದು. ಮನಿಯಾರ್ಡರ್, ಕವರ್, ಪೋಸ್ಟಲ್ ಆರ್ಡರ್, ಇತ್ಯಾದಿಗಳ ದರ ಏರಿಕೆಯ ಭಾರ ನೇರವಾಗಿ ಅವರ ಮೇಲೆ ಬಿದ್ದರೆ ಟೆಲಿಗ್ರಾಂ, ಟೆಲಿಫೋನ್; ಇತ್ಯಾದಿಗಳ ದರ ಏರಿಕೆಯ ಭಾರವು ಅವರ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೀಳುವುದು.

ರೈಲ್ವೆ ಪ್ರಯಾಣ ದರಗಳ ಹೆಚ್ಚಳದಿಂದ, ಮುಖ್ಯವಾಗಿ ನಗರಗಳ ಹಾಗೂ ಆಸುಪಾಸಿನ ಪ್ರದೇಶಗಳ ರೈಲ್ವೆ ಪ್ರಯಾಣ ದರಗಳು 2/3ರಷ್ಟು ಹೆಚ್ಚಿದುದರಿಂದ ಸರಕಾರಿ ನೌಕರರು, ವಿದ್ಯಾರ್ಥಿಗಳು, ಕೆಲಸಗಾರರು, ನೌಕರರು, ಇತರ ಜನ ಸಾಮಾನ್ಯರು ಬಹಳ ತೊಂದರೆಗೊಳಗಾಗಿರುವರು. ಎರಡನೇ ದರ್ಜೆಯ ರೈಲ್ವೆ ಪ್ರಯಾಣದ ಸೀಸನ್ ಟಿಕೇಟುಗಳ ಹೊಸ ದರಗಳು ಪ್ರತಿ ತಿಂಗಳಿಗೆ 5 ಕಿ. ಮೀ. ವರೆಗೆ ರೂ 15 (ಹಳೆಯ ದರ ರೂ. 6-50), 25 ಕಿ.ಮೀ.ವರೆಗೆ ರೂ. 28 (ರೂ. 18), 50 ಕಿ. ಮೀ. ವರೆಗೆ ರೂ 42 (ರೂ.28) 80 ಕಿ. ಮೀ. ವರೆಗೆ ರೂ.69 (36.50). ಎರಡನೇ ದರ್ಜೆಯ ಪ್ರಯಾಣ ದರ ಕನಿಷ್ಟ 80 ಪೈಸೆಗೇರಿಸಿದ್ದು, ಸೀಸನ್ ಟಿಕೇಟುಗಳನ್ನು 80 ಕಿ.ಮೀ. ದೂರದ ಪ್ರಯಾಣಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಇದರಿಂದಾಗಿ ನಮ್ಮ ರಾಜ್ಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು–ಮೈಸೂರಿಗೆ ಇನ್ನು ಮುಂದೆ ಸೀಸನ್ ಟಿಕೆಟು ದೊರೆಯಲಾರದು. ಪೇಟೆ ಪಟ್ಟಣಗಳ ಮತ್ತು ಸುತ್ತುಮುತ್ತಲಿನ ಪ್ರದೇಶಗಳೊಳಗಿನ ರೈಲ್ವೆ ಪ್ರಯಾಣದ ಸೀಸನ್ ಟಿಕೆಟುಗಳನ್ನು 80 ಕಿ. ಮೀ.ಗೆ ಸೀಮಿತಗೊಳಿಸಲಾಗುವುದು. ನಗರಗಳಲ್ಲಿ ಮೊದಲೇ ವಸತಿ ಸೌಕರ್ಯಗಳ ತೀವ್ರ ಅಭಾವವಿದ್ದು, ಈಗ ದೂರದ ಪ್ರದೇಶಗಳಿಂದ ಬಂದುಹೋಗಲಿಕ್ಕೂ ರೈಲ್ವೆ ಪ್ರಯಾಣವೂ ತುಂಬಾ ದುಬಾರಿಯಾಗುವುದರಿಂದ ಜನಸಾಮಾನ್ಯರಿಗೆ ಅತೀವ ಕಷ್ಟವಾಗುತ್ತಿದೆ.

ರೈಲ್ವೆ ಸಾರಿಗೆಯ ದರಗಳನ್ನು ಗಣನೀಯವಾಗಿ ಏರಿಸಲಾಗಿದೆ. ಕಬ್ಬು, ಸಕ್ಕರೆ, ಅಡಿಗೆ ತೈಲ, ಉಪ್ಪು, ಆಹಾರ ಧಾನ್ಯಗಳು, ಸಿಮೆಂಟ್, ಕಲ್ಲಿದ್ದಲು, ಉಕ್ಕು, ಪೆಟ್ರೋಲಿಯಂ, ಇವುಗಳ ಸಾರಿಗೆ ದರಗಳು ಹೆಚ್ಚಿರುವುದರಿಂದ ಉತ್ಪಾದನಾ ಹಾಗೂ ವಿತರಣಾ ವೆಚ್ಚಗಳೂ ಸಾರ್ವತ್ರಿಕವಾಗಿ ಹೆಚ್ಚಲಿರುವವು. ಪರಿಣಾಮ, ಪುನಃ ಬೆಲೆ ಏರಿಕೆ, ಹಣದುಬ್ಬರ. ಜೀವನಾವಶ್ಯಕ ವಸ್ತುಗಳು ಶ್ರೀ ಸಾಮಾನ್ಯನ ಕೈಗೆಟುಕಲಾರದಾಗುವುವು.

ರೈಲ್ವೆ ಮುಂಗಡ ಪತ್ರದಲ್ಲಿ ಹೊಸ ರೈಲು ದಾರಿಗಳ ನಿರ್ಮಾಣ, ಇರುವ ರೈಲು ದಾರಿಗಳ ದುರಸ್ತಿ, ಪ್ರಯಾಣ ಹಾಗೂ ಸಾರಿಗೆ ಬಂಡಿಗಳ ದುರಸ್ತಿ ಹಾಗೂ ಹೆಚ್ಚಳ, ಆಧುನೀಕರಣ, ಪ್ರಯಾಣ ಮತ್ತು ಸಾಗಣಿಕೆಯ ರಕ್ಷಣೆ, ಅಪಘಾತಗಳನ್ನು ತಪ್ಪಿಸುವ ಕಾರ್ಯ, ಇತ್ಯಾದಿಗಳಿಗೆ ಹೆಚ್ಚಿನ ಆದ್ಯತೆ ನೀಡಲಿಲ್ಲ. ವಿಶ್ವಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಒತ್ತಾಯದಿಂದ, ರೈಲ್ವೆಯನ್ನೂ ಒಂದು ಲಾಭದಾಯಕ ಸಂಸ್ಥೆ ಎಂದು ಪರಿಗಣಿಸಲಾಗುತ್ತಿದೆ. ಪರಿಣಾಮವಾಗಿ ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಗೆ, ಆರ್ಥಿಕ ಅಭಿವೃದ್ಧಿಗೆ, ವಿತರಣಾ ವ್ಯವಸ್ಥೆಗೆ, ಜನಜೀವನಕ್ಕೆ ಆಗುವ ದುಷ್ಪರಿಣಾಮಗಳನ್ನು ಅಲಕ್ಷಿಸಲಾಗುತ್ತಿದೆ.

ಹೆಚ್ಚುತ್ತಿರುವ ಅಪ್ರತ್ಯಕ್ಷ ತೆರಿಗೆ

ಈ ವರ್ಷದ ಮುಂಗಡ ಪತ್ರದಲ್ಲಿ ಎಂದಿನಂತೆ ಅಪ್ರತ್ಯಕ್ಷ ತೆರಿಗೆಗಳ ಪಾಲೇ ಹೆಚ್ಚಾಗಿದೆ. ಸುಂಕ ಹೆಚ್ಚಿಸಿ ವರ್ಷಕ್ಕೆ 393 ಕೋಟಿ ರೂಪಾಯಿಗಳ ಆದಾಯವೂ, ಕಂಪೆನಿಗಳ ಲಾಭದ ಮೇಲಿನ ಪ್ರತ್ಯಕ್ಷ ತೆರಿಗೆಯಿಂದ ವರ್ಷಕ್ಕೆ 102 ಕೋಟಿ ರೂಪಾಯಿ ಆದಾಯವೂ ಅಬಕಾರಿ ತೆರಿಗೆ ಹೆಚ್ಚಳದಿಂದ ವರ್ಷಕ್ಕೆ ರೂ. 393 ಕೋಟಿ ಆದಾಯವೂ ಬರುವಂತಾಗಿದೆ. ಒಟ್ಟು ರೂ. 820 ಕೋಟಿ ಹೆಚ್ಚು ಆದಾಯದಲ್ಲಿ ರಾಜ್ಯ ಸರ್ಕಾರಗಳಿಗೂ ರೂ. 104 ಕೋಟಿ ಮೀಸಲಾಗಿರಿಸಿ ಕೇಂದ್ರ ಸರ್ಕಾರಕ್ಕೆ ನಿವ್ವಳ ರೂ. 716 ಕೋಟಿ ಸಿಗುವುದು. ಸಿಮೆಂಟ್‌ನ ಮೇಲಿನ ಅಬಕಾರಿ ತೆರಿಗೆಯನ್ನು ಟನ್‌ಗೆ ರೂ. 135 ರಿಂದ 205ಕ್ಕೆ ಏರಿಸಿ ರೂ. 182 ಕೋಟಿಯಷ್ಟು ಹೆಚ್ಚುವರಿ ಆದಾಯ ಪಡೆಯುವಂತಾಗಿದೆ. ಒಂದೊಂದು ಅವಶ್ಯಕ ವಸ್ತುಗಳ ಮೇಲೆ ಇಷ್ಟೊಂದು ಪ್ರಮಾಣದಲ್ಲಿ ಅಪ್ರತ್ಯಕ್ಷ ತೆರಿಗೆಗಳನ್ನು ಹೇರುವುದರಿಂದ ಸಾಮಾನ್ಯ ಬೆಲೆ ಮಟ್ಟವೇರಿ, ಜೀವನ ವೆಚ್ಚವೂ ಏರಿ ಜನರು ಸಾಮಾಜಿಕ ವ್ಯಯದಿಂದ ತೀವ್ರ ವಂಚಿತರಾಗಿದ್ದಾರೆ. ಸಿಗರೇಟ್, ಕಾಗದ, ಮತ್ತಿತರ ಅವಶ್ಯಕ ಸಾಮಗ್ರಿಗಳ ಮೇಲಿನ ಅಬಕಾರಿ ತೆರಿಗೆಯನ್ನು ಹೆಚ್ಚಿಸಲಾಗಿದೆ. ಸಕ್ಕರೆ, ಕೆಲವು ವಿಧದ ಬಟ್ಟೆ, ವಿದ್ಯುತ್ ಬಲ್ಬ್‌ಗಳ ಮೇಲಿನ ಅಬಕಾರಿ ತೆರಿಗೆಯಲ್ಲಿ ಸ್ವಲ್ಪ ರಿಯಾಯಿತಿ ಮಾಡಿದ್ದು ಮತ್ತು ಪ್ರೆಶ್ಶರ್ ಕುಕ್ಕರ್ ಮೇಲಿನ ಅಬಕಾರಿ ತೆರಿಗೆಯನ್ನು ತೆಗೆದುಹಾಕಿದ್ದು, ಜನಸಾಮಾನ್ಯರಿಗೆ ಸಾಕಷ್ಟು ಪರಿಹಾರ ಸಿಕ್ಕಿದಂತಾಗಲೇ ಇಲ್ಲ.

ಹೊಸ ತೆರಿಗೆಗಳ ಮೂಲಕ ಈ ವರ್ಷ ಪಡೆಯಬಹುದಾದ ರೂ. 716 ಕೋಟಿ ಆದಾಯ ಒಂದು ದೊಡ್ಡ ದಾಖಲೆಯಾಗಿದೆ. ಹಿಂದಿನ ವರ್ಷಗಳಲ್ಲಿ ಹೊಸ ತೆರಿಗೆಗಳ ಮೊತ್ತ ಹೀಗಿವೆ:—

1982–83	ರೂ.	533 ಕೋಟಿ
1981–82	ರೂ.	271 ಕೋಟಿ
1980–81	ರೂ.	282 ಕೋಟಿ
1979–80	ರೂ.	665 ಕೋಟಿ.

ವರ್ಷ ವರ್ಷವೂ ಪ್ರತ್ಯಕ್ಷ ತೆರಿಗೆಯ ಅಂಶವು ಕಡಿಮೆಯಾಗುತ್ತಿದ್ದು, ಅಪ್ರತ್ಯಕ್ಷ ತೆರಿಗೆಯ ಅಂಶವು ಹೆಚ್ಚುತ್ತಲೇ ಇದೆ. 1950–51ರಲ್ಲಿ ಒಟ್ಟು ತೆರಿಗೆಗಳ ಆದಾಯ ರೂ. 405 ಕೋಟಿಯಲ್ಲಿ ವೈಯಕ್ತಿಕ ಆದಾಯ ತೆರಿಗೆಯ ಅಂಶ 32·8% ಕಂಪೆನಿಗಳ ಆದಾಯ ತೆರಿಗೆಯ ಅಂಶ 9·9%; ಕೇಂದ್ರ ಅಬಕಾರಿ ತೆರಿಗೆಯ ಅಂಶ 16·8%; ಸುಂಕದ ಅಂಶ 38·8%; ಇತರ ತೆರಿಗೆಗಳ ಅಂಶ 1·7%. ಆದರೆ, 33 ವರ್ಷಗಳ ನಂತರ, ಐದು ಪಂಚ ವಾರ್ಷಿಕ ಯೋಜನೆಗಳ ನಂತರ 1982–83ರಲ್ಲಿ ಒಟ್ಟು ತೆರಿಗೆಗಳ ಆದಾಯ ರೂ. 17615 ಕೋಟಿಗಳಷ್ಟಾಗಿದ್ದು, ಅದರಲ್ಲಿ ವೈಯಕ್ತಿಕ ಆದಾಯದ ಅಂಶ 9·2%; ಕಂಪನಿಗಳ ಲಾಭದ ತೆರಿಗೆ 13·5%; ಕೇಂದ್ರ ಅಬಕಾರಿ ತೆರಿಗೆ 47·3%; ಸುಂಕ 26·1%; ಇತರ ತೆರಿಗೆಗಳು 3·8% ಕೇಂದ್ರ ಅಬಕಾರಿ ತೆರಿಗೆ ಒಂದರ ಅಂಶವೇ ಒಟ್ಟು ತೆರಿಗೆ ಆದಾಯದ ಸುಮಾರು ಅರ್ಧಾಂಶದಷ್ಟಾಗಿರುವುದು. ಒಟ್ಟು ಅಪ್ರತ್ಯಕ್ಷ ತೆರಿಗೆಯ ಅಂಶ 77·3 ಆಗಿದ್ದು, ಪ್ರತ್ಯಕ್ಷ ತೆರಿಗೆಯ ಅಂಶ ಕೇವಲ 22·7% ಆಗಿರುವುದು. ಅಂದರೆ, ವರ್ಷ ವರ್ಷಕ್ಕೂ ರಕ್ಷಣೆ, ಆಡಳಿತ ಮತ್ತು ಅಭಿವೃದ್ಧಿ ವೆಚ್ಚಗಳಿಗೆ ಸಂಪನ್ಮೂಲಗಳನ್ನು ಅಭಿವೃದ್ಧಿಯ ಪ್ರಯೋಜನ ಪಡೆಯುತ್ತಿರುವ ವ್ಯಕ್ತಿಗಳ, ಗುಂಪುಗಳ (ಕಂಪೆನಿಗಳ) ಆಸ್ತಿ ಮತ್ತು ಆದಾಯಗಳ ಮೇಲಿನ ತೆರಿಗೆಗಳಿಂದ ಹೆಚ್ಚೆಚ್ಚು ಪಡೆಯುತ್ತಿಲ್ಲ. ಬದಲು ಅಭಿವೃದ್ಧಿ ಪ್ರಯೋಜನಗಳಿಂದ ವಂಚಿತರಾದ ಜನಸಾಮಾನ್ಯರ ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆಗಳ ಮೂಲಕ ಮತ್ತು ಅದರ ಆದಾಯ ನಿಜ ಮೂಲ್ಯ ಹಣದುಬ್ಬರ

(ಏಳನೇ ಪುಟ ನೋಡಿ)

ಸಿ. ಐ. ಟಿ. ಯು. ೫ನೇ ಸಮ್ಮೇಳನ

ಸಂದೇಶಗಳು

ಚೀನಾ ದೇಶದ ಕಾರ್ಮಿಕರಿಂದ ಸಂದೇಶ

ಐದನೇ ಸಮ್ಮೇಳನದಲ್ಲಿ ಭಾಗವಹಿಸಿ ದೇಶದ ಬೇರೆ ಬೇರೆ ಕಡೆಗಳಿಂದ ಬಂದ ಪ್ರತಿನಿಧಿಗಳೊಡನೆ ಸೇರಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದು ಗೌರವದ ವಿಷಯವೆಂದು ನಾವು ಭಾವಿಸುತ್ತೇವೆ. ಚೀನಾ ದೇಶದ ಕಾರ್ಮಿಕರ ಮತ್ತು ಎಲ್ಲ ಕಾರ್ಮಿಕರ ಸಂಘಗಳ ಪರಿಯಿಂದ ಸಮ್ಮೇಳನಕ್ಕೆ ಹೃತ್ಪೂರ್ವಕ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಭಾರತ ದೇಶದ ಧುಡಿಯುವ ಸಹೋದರ ಸಹೋದರಿಯರಿಗೆ ಹಾರ್ದಿಕ ಅಭಿನಂದನೆಗಳು.

ದೀರ್ಘ ಕಾಲದ ವೀರ ಹೋರಾಟದಲ್ಲಿ ಮಗ್ನರಾಗಿರುವ ಭಾರತದ ಧೀರೋದಾತ್ತ ಕಾರ್ಮಿಕರೂ, ಜನತೆಯೂ, ವೈಭವಪೂರ್ಣ ಕ್ರಾಂತಿಕಾರಿ ಪರಂಪರೆಹೊಂದಿದ್ದಾರೆ. ಸ್ವಾತಂತ್ರ್ಯದ ನಂತರ, ದೇಶದ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸಲು, ಬಡತನ ಹಾಗೂ ಹಿಂದುಳಿದಿರುವಿಕೆಯನ್ನು ಬದಲಾಯಿಸಲು, ಜಗತ್ತಿನ ಶಾಂತಿಯನ್ನು ಎತ್ತಿಹಿಡಿಯಲು, ನೀವು ಸತತವಾಗಿ ನಡೆಸಿದ ಪ್ರಯತ್ನದಲ್ಲಿ ಯಶಸ್ಸು ಪಡೆದಿದ್ದೀರಿ. ಅದೇ ಸಮಯದಲ್ಲಿ ನಿಮ್ಮ ನ್ಯಾಯಯುತ ಹಕ್ಕಿಗಾಗಿ ಹೋರಾಟ ನಡೆಸಿದ್ದೀರಿ. ಸಿ. ಐ. ಟಿ. ಯು. ಸ್ಥಾಪನೆಯಾದಂದಿನಿಂದಲೂ ಅದು ಮುಂಚೂಣಿಯಲ್ಲಿದೆ. ಭಾರತದ ಕಾರ್ಮಿಕರ, ಜನತೆಯ ಗಳಿಕೆಗಳಿಂದ ನಾವು ಆನಂದಪಡುತ್ತಿದ್ದೇವೆ. ಹಾಗೆಯೇ ಅದರಿಂದ ಬಹಳ ಸ್ಫೂರ್ತಿಗೊಂಡಿದ್ದೇವೆ. ನಿಮ್ಮ ಪ್ರಗತಿಯಲ್ಲಿ ಯಶಸ್ಸು ಸಿಗಲೆಂದು ಹಾರೈಸುತ್ತೇವೆ.

ಭಾರತದ ಕಾರ್ಮಿಕರಂತೆಯೇ ಚೀನಾ ದೇಶದ ಕಾರ್ಮಿಕರೂ ಬಹಳ ಕಷ್ಟಗಳನ್ನು ಅನುಭವಿಸಿದ್ದಾರೆ. ಈಗ ತಮ್ಮ ದೇಶವನ್ನು ಸುಧಾರಿಸಿ ಕಾರ್ಮಿಕರ ಜೀವನ ಮಟ್ಟವನ್ನು ಹೆಚ್ಚಿಸುವುದರಲ್ಲಿ ತೊಡಗಿದ್ದಾರೆ. ಹೊಸ ಚೀನಾದ ಮಾಲಕರಾಗಿ, ಸಾಮಾಜಿಕ ಸುಧಾರಣೆಯಲ್ಲಿ, ಸಮತಾವಾದಿ ರಚನೆಯಲ್ಲಿ ಚೀನಾದ ಕಾರ್ಮಿಕರು ಅತಿ ಮಹತ್ವವಾದ ಯಶಸ್ಸು ಗಳಿಸಿದ್ದಾರೆ. ಆದರೆ, ಅದೇ ಸಮಯದಲ್ಲಿ ಕಳೆದ ಮೂವತ್ತು ವರ್ಷಗಳಲ್ಲಿ ಸ್ವಲ್ಪ ಹಿಂಜರಿಕೆಗಳನ್ನೂ ಅನುಭವಿಸಿದ್ದಾರೆ. ಆದರೆ 1979ರಲ್ಲಿ ಚೀನಾ ಕಮ್ಯುನಿಸ್ಟ ಪಾರ್ಟಿಯ ಕೇಂದ್ರ ಸಮಿತಿಯ ಆದೇಶದ ಮೇರೆಗೆ ಎಲ್ಲ ರಾಜ್ಯಗಳ ಚೀನೀ ಜನತೆ ತಮ್ಮ ಪರಿಶ್ರಮದಿಂದ ಚರಿತ್ರಾರ್ಹವಾದ ಬದಲಾವಣೆಯನ್ನು ತಂದಿದ್ದಾರೆ. ನಮ್ಮ ಹಾದಿಯಲ್ಲೇ ಮುನ್ನಡೆದು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಹಲವಾರು ನೀತಿ ನಿರೂಪಣೆಗಳನ್ನು ಅನುಸರಿಸಿ, ಕೈಗಾರಿಕೆ, ಒಕ್ಕಲುತನ, ಶಿಕ್ಷಣ, ಸಂಸ್ಕೃತಿ ಮತ್ತು ವಿಜ್ಞಾನಗಳಲ್ಲಿ ಹೆಚ್ಚಿನ ಬೆಳವಣಿಗೆ ಪಡೆದು, ಹಣಕಾಸಿನ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಮೂಲಭೂತ ತಿರುವನ್ನು ತರಲು ಸಾಧ್ಯವಾಗಿದೆ.

ಚೀನಾ ದೇಶದ 100 ಕೋಟಿ ಜನರಿಗೆ ಬಟ್ಟೆ ಹಾಗೂ ಆಹಾರ ಒದಗಿಸಲಿಕ್ಕೆ ಅವರಿಗೆ ಉದ್ಯೋಗ ಕೊಡಿಸಲಿಕ್ಕೆ ಸಾಧ್ಯವಾಗಿದೆ. ಕಾರ್ಮಿಕರ. ಜನತೆಯ ಜೀವನ ಮಟ್ಟ ಸುಧಾರಿಸಿದೆ. ಪ್ರಗತಿ ತರುವಲ್ಲಿ ಹಲವಾರು ಅಡಚಣೆಗಳನ್ನು ಎದುರಿಸುತ್ತಾ ಚೀನಾ ದೇಶದ ಕಾರ್ಮಿಕ ವರ್ಗ, ಈಗ ಸಂಘಟನಾತ್ಮಕ, ಆರ್ಥಿಕ ಪದ್ಧತಿಯ ಸುಧಾರಣೆಯಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. ಏಕೆಂದರೆ ಅದರಿಂದಾಗಿ ಚೀನದ ರೀತಿಯಲ್ಲಿಯೇ ಸಮತಾವಾದವನ್ನು ಸ್ಥಾಪಿಸುವ ಸಲುವಾಗಿ ಸ್ಥಿರವಾಗಿಯೂ, ಯಾವ ಅಡೆತಡೆ ಇಲ್ಲದೆಯೂ ಚೀನದ ಆರ್ಥಿಕ ಪರಿಸ್ಥಿತಿ ಮುಂದುವರಿಯುವಂತಾಗುತ್ತದೆ.

ಅತಿ ಹೆಚ್ಚಿನ ಪ್ರಜಾಪ್ರಭುತ್ವದ ಮತ್ತು ಸಾಂಸ್ಕೃತಿಕವಾಗಿ ಮುಂದುವರಿದ ಆಧುನಿಕ ಸಮತಾವಾದಿ ಚೀನವನ್ನಾಗಿ ಪರಿವರ್ತಿಸಲು ಚೀನದ ಕಾರ್ಮಿಕ ವರ್ಗ ಶ್ರಮಪಟ್ಟು ದುಡಿಯುತ್ತಿದೆ.

ಏಶಿಯಾ ಖಂಡದಲ್ಲಿ ಚೀನಾ ಮತ್ತು ಭಾರತ ಎರಡು ದೊಡ್ಡ ರಾಷ್ಟ್ರಗಳು. ಇವು ಜಗತ್ತಿನಲ್ಲಿ ಹೆಚ್ಚು ಪ್ರಭಾವ ಹೊಂದಿವೆ. ಎರಡು ಸಾವಿರ ವರ್ಷಗಳಿಂದಲೂ ನಮ್ಮ ಎರಡು ದೇಶದ ಜನತೆ ಸಾಂಪ್ರದಾಯಿಕ ಗೆಳೆತನವನ್ನು ಹೊಂದಿದ್ದರು. ರಾಷ್ಟ್ರದ ಸ್ವಾತಂತ್ರ್ಯದ ಸಲುವಾಗಿಯೂ ನಮ್ಮ ದೇಶಗಳನ್ನು ಕಟ್ಟುವ ಸಲುವಾಗಿಯೂ, ನಮ್ಮಿಬ್ಬರೊಳಗೆ ಚಿಂತನೆಯಿತ್ತು. ಆ ಕೆಲಸದಲ್ಲಿ ನಾವು ಒಬ್ಬರಿಗೊಬ್ಬರು ಸಹಾನುಭೂತಿ ತೋರಿಸಿದ್ದೆವು, ಬೆಂಬಲ ತೋರಿಸಿದ್ದೆವು. ಹಿಂದಿ-ಚೀನೀ ಭಾಯಿ ಭಾಯಿ ಎಂಬ ಘೋಷಣೆ ನಮ್ಮೆರಡು ಜನತೆಯ ಹೃದಯದಲ್ಲಿ ಆಳವಾಗಿ ಬೇರೂರಿದೆ. ಚೀನಾ ಮತ್ತು ಭಾರತ ಎರಡೂ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳು. ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಬೆಳೆಸಲು, ದೇಶದ ಸ್ವಾತಂತ್ರ್ಯವನ್ನು ಭದ್ರಗೊಳಿಸಲು, ಜನತೆಯ ಜೀವನ ಮಟ್ಟವನ್ನು ಸುಧಾರಿಸಲು ಕಷ್ಟಕರವಾದ ಕಾರ್ಯದಲ್ಲಿ ತೊಡಗಿದ್ದೇವೆ. ಮೂಲಭೂತ ಹಿತಗಳ ಕುರಿತು ಭಿನ್ನಾಭಿಪ್ರಾಯ ನಮ್ಮೊಳಗಿಲ್ಲ. ನಮ್ಮೊಳಗೆ ಆಕ್ರಮಣದ ಭೀತಿಯೂ ಇಲ್ಲ. ನಮ್ಮಿಬ್ಬರೊಳಗಿನ ಕೊರತೆಗಳನ್ನು ನಿವಾರಿಸಿ ಇನ್ನೂ ಹೆಚ್ಚಿನ ಸಹಕಾರದಿಂದಿರುವಂತಾಗಲು ನಮ್ಮೊಳಗೆ ತಿಳುವಳಿಕೆಯನ್ನೂ ಗೆಳೆತನವನ್ನೂ ಹೆಚ್ಚಿಸಿಕೊಳ್ಳಬೇಕು, ಅನುಭವಗಳನ್ನು ವಿನಿಮಯಮಾಡಿಕೊಳ್ಳಬೇಕು. ಒಬ್ಬರಿಂದ ಮತ್ತೊಬ್ಬರು ಕಲಿಯಬೇಕು ಎಂಬುದೇ ನಮ್ಮ ಅಪೇಕ್ಷಣೆಯಾಗಿದೆ. ನಮ್ಮ ಬೆಳವಣಿಗೆಗೆ ಶಾಂತಿಯುತ, ಸೌಹಾರ್ದಮಯವಾದ ಅಂತರರಾಷ್ಟ್ರೀಯ ಪರಿಸರ ಬೇಕು. ಚೀನಾ ಮತ್ತು ಭಾರತದ ಕಾರ್ಮಿಕ ಸಂಘಗಳೊಳಗಿನ ಸಹಕಾರ ಹಾಗೂ ಗೆಳೆತನವನ್ನು ಬಲಗೊಳಿಸಿದ್ದಾದ್ದರೆ, ನಮ್ಮ ಎರಡೂ ರಾಷ್ಟ್ರಗಳ ಕಾರ್ಮಿಕರ ಹಾಗೂ ಜನತೆಯ ಮೂಲಭೂತ ಹಿತಾಸಕ್ತಿಗಳಿಗನುಸಾರವಾಗಿರುವುದಷ್ಟೇ ಅಲ್ಲದೆ ಏಶಿಯಾದಲ್ಲೂ ಇಡೀ ಜಗತ್ತಿನಲ್ಲೂ ಶಾಂತಿ ಸ್ಥಾಪನೆಗೆ ಸಹಾಯವಾಗುತ್ತದೆ ಚೀನಾ ಮತ್ತು ಭಾರತ ದೇಶದ ಜನರೊಳಗೆ ಸಂಪರ್ಕ ಹೆಚ್ಚಿಸಲು, ಆರ್ಥಿಕ, ವ್ಯಾಪಾರ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನಮ್ಮ ಸಂಬಂಧ ಹೆಚ್ಚಿಸಿಕೊಳ್ಳಲು ಬಹಳಷ್ಟು ಅವಕಾಶಗಳಿವೆ. ಈ ದಿಸೆಯಲ್ಲಿ ನೀವು ಸತತವಾಗಿ ನಡೆಸಿರುವ ಪ್ರಯತ್ನಕ್ಕೆ ನಾವು ನಿಮಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಆಲ್ ಚೈನಾ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಇವರೊಳಗಿನ ಸಂಬಂಧ ಬೆಳೆಯುತ್ತಿದೆ. ಚೀನಾ ಮತ್ತು ಭಾರತದ ಕಾರ್ಮಿಕರೆಲ್ಲ ನಂಬಿಕೆಯುಳ್ಳ ಬಂಧುಗಳಾಗಿದ್ದಾರೆ. ಇನ್ನು ಮುಂದೆಯೂ ಆ ಸಂಬಂಧ, ಗೆಳೆತನವನ್ನು ಮುಂದುವರಿಸುತ್ತಾರೆ.

ಗುಲಾಮಗಿರಿಯಲ್ಲಿರುವ ದಬ್ಬಾಳಿಕೆ ಗೊಳಗಾದ ಎಲ್ಲ ರಾಷ್ಟ್ರ ಮತ್ತು ಜನತೆಯ ಸ್ವಾತಂತ್ರ್ಯಕ್ಕಾಗಿ, ರಾಷ್ಟ್ರದ ಸಾರ್ವಭೌಮತ್ವಕ್ಕಾಗಿ, ಹೊಸ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧ ಬೆಳೆಸಲಿಕ್ಕೆ ನಡೆಸುತ್ತಾ ಬಂದಿರುವ ಎಲ್ಲ ಹೋರಾಟಗಳಿಗೆ ಚೀನದ ಕಾರ್ಮಿಕ ಸಂಘಗಳು ಬೆಂಬಲ ನೀಡಿವೆ. ಸಾಮ್ರಾಜ್ಯಶಾಹಿಗಳ, ವಸಾಹತುವಾದದ ವಿಸ್ತರಣೆ ಮತ್ತು ಆಕ್ರಮಣ ನೀತಿಯನ್ನು ವಿರೋಧಿಸುವ ಈ ರಾಷ್ಟ್ರಗಳ ಹೋರಾಟವನ್ನು ನಾವು ಯಾವಾಗಲೂ ಬೆಂಬಲಿಸುತ್ತಾ ಬಂದಿದ್ದೇವೆ. ಸ್ವಾತಂತ್ರ್ಯ, ಸಂಪೂರ್ಣ ಸಮಾನತೆ, ಸಮಾನ ಮಾನ್ಯತೆ, ಆಂತರಿಕ ಸಮಸ್ಯೆಗಳಲ್ಲಿ ಕೈ ಹಾಕದಮಾಡಬಾರದೆಂಬ ನೀತಿಗನುಸಾರವಾಗಿ ಅಂತರರಾಷ್ಟ್ರೀಯ ಚಟುವಟಿಕೆಗಳಲ್ಲಿ ಎಲ್ಲಾ ದೇಶಗಳ ಕಾರ್ಮಿಕ ಸಂಘಟನೆಗಳೊಡನೆ ನಾವು ಸೌಹಾರ್ದ ಸಂಬಂಧ ಇಟ್ಟುಕೊಂಡಿದ್ದೇವೆ. ಚೀನಾ-ಭಾರತ ಸಂಬಂಧವನ್ನು ಬಲಗೊಳಿಸಲು, ನಮ್ಮೆರಡು ದೇಶಗಳ ಕಾರ್ಮಿಕರೊಳಗೆ ಬಾಂಧವ್ಯವನ್ನು ಹೆಚ್ಚಿಸಲು, ಜಗತ್ತಿನಲ್ಲಿ ಶಾಂತಿ ಕಾಪಾಡಿ, ಮಾನವ ಜನತೆಯ ಪ್ರಗತಿ ಸಾಧಿಸಲು ನಾವು ಭಾರತದ ಕಾರ್ಮಿಕರೊಡನೆಯೂ, ಕಾರ್ಮಿಕ ಸಂಘಗಳೊಡನೆಯೂ ಜಂಟೀ ಪ್ರಯತ್ನ ಮಾಡಬೇಕೆಂದು ಇಚ್ಛಿಸುತ್ತೇವೆ. ನಿಮ್ಮ ಸಮ್ಮೇಳನಕ್ಕೆ ದೊಡ್ಡ ಯಶಸ್ಸು ಸಿಗಲೆಂದು ಹಾರೈಸುತ್ತೇವೆ.

ಕಾಮ್ರೇಡ್ ಚೆನ್ ಯು,
ಎ.ಸಿ.ಎಫ್.ಟಿ.ಯು ವಿನ ಕಾರ್ಯಕಾರಿ ಸಮಿತಿಯ ಸ್ಥಾಯಿ ಸಮಿತಿ ಸದಸ್ಯರು

ಕಾಮ್ರೇಡ್ ಚೆನ್ ಬೋಲಿನ್,
ಎ.ಸಿ.ಎಫ್.ಟಿ.ಯು ವಿನ ಅಂತರ ರಾಷ್ಟ್ರೀಯ ಸಂಬಂಧಗಳ ಖಾತೆಯ ಸದಸ್ಯ,

ಕಾಮ್ರೇಡ್ ಹು ಬಿರೇನ್,
ಅಂತರರಾಷ್ಟ್ರೀಯ ಸಂಬಂಧಗಳ ಖಾತೆಯ ಸದಸ್ಯ, ಎ ಸಿ ಎಫ್ ಟಿ ಯು

ಸೋವಿಯತ್ ಯೂನಿಯನ್ ಕಾರ್ಮಿಕರಿಂದ ಸಂದೇಶ

ಸೋವಿಯತ್ ಯೂನಿಯನ್ನಿನಲ್ಲಿ ಎಲ್ಲ ದುಡಿಯುವ ಕಾರ್ಮಿಕರ ಮತ್ತು ಮಹಿಳೆಯರ ಪರವಾಗಿ ಹಾರ್ದಿಕ ಶುಭ ಕೋರಿ, 5ನೆಯ ಸಿ.ಐ.ಟಿ.ಯು. ಸಮ್ಮೇಳನ ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ತಮ್ಮ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಆಮಂತ್ರಣ ಕಳುಹಿಸಿಕೊಟ್ಟಿರುವುದಕ್ಕಾಗಿ ತುಂಬಾ ಋಣಿಯಾಗಿದ್ದೇವೆ. ಇದರಿಂದಾಗಿ ಸೋವಿಯತ್ ಜನತೆ ಮತ್ತು ಕಾರ್ಮಿಕ ಸಂಘಗಳ ಕುರಿತು ನಿಮ್ಮ ಹೆಚ್ಚಿನ ಸ್ನೇಹಮಯ ಸಂಬಂಧವನ್ನು ತೋರ್ಪಡಿಸುತ್ತದೆ. ನಮ್ಮೆರಡು ದೇಶಗಳ ಕಾರ್ಮಿಕರ ಮತ್ತು ಕಾರ್ಮಿಕ ಸಂಘಗಳ ನಡುವೆ ಸ್ನೇಹಮಯ ಸಂಬಂಧವನ್ನು ಬೆಳೆಸಲು, ಹಾಗೂ ಅದನ್ನು ಭದ್ರಗೊಳಿಸಲು ನಮ್ಮ ಈ ಸಂದರ್ಶನ ಅನುಕೂಲವಾಗುತ್ತದೆಂದು ಆಶಿಸುತ್ತೇವೆ. ಶಾಂತಿ, ಗೆಳೆತನ, ಸಹಕಾರದ ಒಂದು ಒಪ್ಪಂದ 1971ರಲ್ಲಿ ಮಾಡಿಕೊಂಡ ನಂತರ ಭಾರತ-ರಶ್ಯಾದ ಗೆಳೆತನ ಭದ್ರ ತಳಹದಿಯಲ್ಲಿ ಸ್ಥಾಪಿಸಿದಂತಾಗಿದೆ. ಈ ಒಪ್ಪಂದ ಎರಡೂ ದೇಶಗಳ ಹಿತವನ್ನು ರಕ್ಷಿಸುವುದಷ್ಟೇ ಅಲ್ಲ ಏಶಿಯಾ ಖಂಡದಲ್ಲೂ ಹಾಗೆಯೇ ಇಡೀ ಜಗತ್ತಿನಲ್ಲೂ ಶಾಂತಿ ಪಾಲನೆಗೆ ಸಹಾಯವಾಗಿದೆ.

ಭಾರತದ ಶಾಂತಿಯುತ ವಿದೇಶಿ ಧೋರಣೆಯನ್ನೂ ಹಾಗೆಯೇ ಸಾಮಾಜಿಕ ಮತ್ತು ಆರ್ಥಿಕ ಆಹ್ವಾನವನ್ನು ಎದುರಿಸುವ ಸಲುವಾಗಿ ದೇಶದ ಪ್ರಜಾಪ್ರಭುತ್ವ ಶಕ್ತಿಗಳು ನಡೆಸುತ್ತಿರುವ ಧೀರ ಹೋರಾಟಗಳನ್ನೂ ಸೋವಿಯತ್ ಜನತೆ ಆಸ್ಥೆಯಿಂದ ಈಕ್ಷಿಸುತ್ತಿದೆ.

ಅವರವರ ದೃಷ್ಟಿಕೋಣ ಮತ್ತು ಅಂತ್ರರಾಷ್ಟ್ರೀಯ ಸಂಬಂಧಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಪ್ರತಿಯೊಂದು ರಾಷ್ಟ್ರದ ಕಾರ್ಮಿಕರೊಡನೆ ಕಾರ್ಮಿಕ ವರ್ಗದ ನೆಲೆಯಲ್ಲಿ ಸ್ನೇಹಮಯ ಸಂಬಂಧ ಬೆಳೆಸಲು ವಿಶಾಲಗೊಳಿಸಲು ಕಾರ್ಮಿಕ ವರ್ಗದ ಸಂಘಗಳು ಪ್ರಯತ್ನ ನಡೆಸಿವೆ.

ರಶ್ಯದ ಕಾರ್ಮಿಕ ಕೇಂದ್ರ 145 ದೇಶಗಳ ಯೂನಿಯನ್‌ಗಳೊಡನೆ ಸಂಬಂಧ ಇಟ್ಟುಗೊಂಡಿದೆ. ಸಿ,ಐ.ಟಿ. ಯು. ಜೊತೆಯಲ್ಲಿ ನಮ್ಮ ಸಂಬಂಧ ಆಳವಾಗಿ ಮೂಡಿ ಬರುತ್ತಿದೆಯೆಂಬುದಕ್ಕೆ ನಾವು ಇಲ್ಲಿಗೆ ಬಂದಿರುವುದೇ ಸಾಕ್ಷಿಯಾಗಿದೆ.

ಇಲ್ಲಿ ಇದ್ದ ಕೆಲವೇ ಸಮಯದಲ್ಲಿ ನೀವು ಸೋವಿಯತ್ ಜನತೆಯ ಜೀವನ ಸೋವಿಯತ್ ಕಾರ್ಮಿಕ ಸಂಘಗಳ ಕುರಿತು ತೋರಿಸಿದ ಆಸ್ಥೆಯನ್ನು ಕಂಡು ರಶ್ಯಾ ದೇಶದ ಕಾರ್ಮಿಕ ಸಂಘಗಳ ಸಿದ್ಧಾಂತ ಹಾಗೂ ಜನರ ಸಮಸ್ಯೆಗಳ ಕುರಿತು ಕೆಲವು ವಿಷಯ ತಿಳಿಸಲು ಇಚ್ಛೆಪಡುತ್ತೇವೆ.

ನಮ್ಮ ದೇಶದ ಆರ್ಥಿಕ, ಸಾಮಾಜಿಕ ಬೆಳವಣಿಗೆ ಶೀಘ್ರಗತಿಯಲ್ಲಿ ಮುನ್ನಡೆದಿದೆ. ಈಗ ಚಾಲ್ತಿಯಲ್ಲಿರುವ 11ನೇ ಪಂಚವಾರ್ಷಿಕ ಯೋಜನೆಯ ಎರಡೇ ವರ್ಷಗಳಲ್ಲಿ 400ಕ್ಕೂ ಮೇಲ್ಪಟ್ಟು ಕೈಗಾರಿಕೆಗಳನ್ನು ಪ್ರಾರಂಭಿಸಿದ್ದೇವೆ. ರಾಷ್ಟ್ರೀಯ ಉತ್ಪಾದನೆಯ 80% ಆದಾಯವನ್ನು ಜನತೆಯ ಆರ್ಥಿಕ-ಸಾಮಾಜಿಕ ಹಿತದ ಸಲುವಾಗಿ ಪ್ರತಿ ವರ್ಷ ತೆಗೆದಿಡುತ್ತೇವೆ.

ಸದ್ಯ ಜ್ಯಾರಿಯಲ್ಲಿರುವ ಐದನೇ ಪಂಚ ವಾರ್ಷಿಕ ಯೋಜನೆಯ ಎರಡು ವರ್ಷಗಳಲ್ಲಿ ನೂರಾರು ಹೊಸ ಶಾಲೆ, ಆಸ್ಪತ್ರೆ, ಸಾರ್ವಜನಿಕ ಹಿತದ ಕೆಲಸಗಳಾಗಿರುವುದನ್ನೂ, 2 ಕೋಟಿ ಜನ ಹೊಸ ಮನೆಗಳಿಗೆ ಹೋಗಿರುವುದನ್ನು ಕಾಣುತ್ತಿದ್ದೇವೆ.

ಹೋದ ವರ್ಷ ಕೈಗಾರಿಕೆಯ ಮತ್ತು ಕೃಷಿ ಕಾರ್ಮಿಕರ ಸಂಬಳ

(6ನೇ ಪುಟ ನೋಡಿ)

ಸಾಮಾಜಿಕ ಬದಲಾವಣೆಯ ಮಾರ್ಕ್ಸ್‌ವಾದೀ

ಇತಿಹಾಸದ ಭೌತವಾದೀ ಸಿದ್ಧಾಂತ ತತ್ವಶಾಸ್ತ್ರ, ಧರ್ಮ, ಪರಂಪರೆ ಇತ್ಯಾದಿ ತತ್ವವಿಚಾರದ ಅಂಶಗಳನ್ನು ಕಡೆಗಣಿಸುತ್ತದೆ ಎಂದು ಈ ಸಿದ್ಧಾಂತದ ವಿರೋಧಿಗಳು ಟೀಕಿಸುತ್ತಾರೆ. ಆದರೆ ಈ ಟೀಕೆ ಈ ವಿರೋಧಿಗಳ ಅಜ್ಞಾನವನ್ನಷ್ಟೇ ಬಹಿರಂಗಪಡಿಸುತ್ತದೆ .....

ಭಾರತದ ಸನ್ನಿವೇಶದ ಮೇಲೆ ಮಾರ್ಕ್ಸ್‌ವಾದ ಪ್ರಭಾವ ಬೀರಿದಂತೆ ಕಾಣುವುದಿಲ್ಲ ಎನ್ನುತ್ತಾರೆ ಈ ಟೀಕಾಕಾರರು. ಆದರೆ ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟಕ್ಕೂ, ಕೃಷಿ ಕ್ರಾಂತಿಗೂ ಮತ್ತು ಸಾಮ್ರಾಜ್ಯಶಾಹಿ ಅಧಿಪತ್ಯದ ಅಂತ್ಯಕ್ಕೂ ಸಂಬಂಧ ಕಲ್ಪಿಸಿದ್ದು, ಕೃಷಿಕ್ರಾಂತಿ ಮತ್ತು ವರ್ಗ ಹೋರಾಟ ಹಿಂದೂ-ಮುಸ್ಲಿಂ ಪ್ರತ್ಯೇಕತೆಯನ್ನು ಕಾರ್ಯತಃ ನಿವಾರಿ ಬಲ್ಲುವ ಪ್ರಮುಖ ಅಂಶ ಎಂದು ಕಂಡುಕೊಂಡಿದ್ದು ಕಮ್ಯೂನಿಸ್ಟ್ ಪಕ್ಷ ಮಾತ್ರ...........

ಇದನ್ನು ಈ ಲೇಖನದಲ್ಲಿ ಇದುವರೆಗೆ ಓದಿದ್ದೀರಿ. ಈ ವಾರ ಪ್ರಕಟವಾಗುತ್ತಿರುವ ಈ ಕೊನೆಯ ಕಂತಿನಲ್ಲಿ ಭಾರತದಲ್ಲಿ ಬಂಡವಾಳಶಾಹೀ ಪೂರ್ವ ತತ್ವಗಳ ವಿರುದ್ಧ ಹೇಗೆ ಹೊಸ ಪ್ರಜ್ಞೆ ಮೂಡುತ್ತಲಿದೆ. ಇದರಲ್ಲಿ ಎಡಪಂಥೀಯ ಪಕ್ಷಗಳ, ಸಾಮೂಹಿಕ ಸಂಘಟನೆಗಳ, ಪ್ರಜಾಪ್ರಭುತ್ವವಾದೀ ತತ್ವಗಳ ಪಾತ್ರಬೇಕು ಎಂದು ಲೇಖಕರು ವಿವರಿಸಿದ್ದಾರೆ.

ಮಾರ್ಕ್ಸ್ ಮರಣ ಶತಾಬ್ದಿ ಲೇಖನ ಮಾಲೆ

ಲೇಖನ — 6

(ಕಳೆದ ಸಂಚಿಕೆಯಿಂದ)

ವಸಾಹತು ದೇಶವೊಂದರಲ್ಲಿ ಕೈಗಾರಿಕಾಭಿವೃದ್ಧಿಯ ನಿಧಾನಗತಿಯ ಪ್ರಕ್ರಿಯೆ ರೈತಾಪಿ ವರ್ಗವನ್ನು ಕಾರ್ಮಿಕ ವರ್ಗವಾಗಿ ಪರಿವರ್ತಿಸುವುದಕ್ಕಿಂತ ಹೆಚ್ಚಾಗಿ ಅವರನ್ನು ನಿರ್ಗತಿಕರನ್ನಾಗಿಸುತ್ತದೆ ಎಂದು ಕಮ್ಯೂನಿಸ್ಟರಿಗೆ ತಿಳಿದಿತ್ತು. ನಗರ ಪ್ರದೇಶಗಳ ಕಾರ್ಖಾನೆಗಳನ್ನು ಸೇರಬೇಕಾಗಿ ಬಂದವರೂ ಕೂಡಾ ತಮ್ಮ ಗ್ರಾಮ್ಯಛಾಯೆಯನ್ನು ಸುಲಭವಾಗಿ ಕಳೆಕೊಳ್ಳುವುದಿಲ್ಲ. ಯಾಕೆಂದರೆ ಮೊದಮೊದಲು ಹಳ್ಳಿಯಲ್ಲಿ ಜಮೀನಿನೊಡನೆ ತಮ್ಮ ಸಂಬಂಧ ಉಳಿಸಿಕೊಂಡು ಅವರು ವರ್ಷದಲ್ಲಿ ಎರಡು ತಿಂಗಳು ತಮ್ಮ ಹಳ್ಳಿಗಳಿಗೆ ಹಿಂದಿರುಗುತ್ತಿದ್ದರು. ಅಲ್ಲದೆ ಗ್ರಾಮಾಂತರದಿಂದ ಹೊಸಬರು ಪ್ರತಿದಿನ ಬಂದು ಸೇರಿ ಇಂತಹ ಕಾರ್ಮಿಕರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಒಂದು ದೃಢವಾದ ವರ್ಗ ತತ್ವ ರೂಪುಗೊಳ್ಳಲು ಸಾಧ್ಯವಾಗದೆ ಅದರಲ್ಲಿ ಪದೇ ಪದೇ ವಿಕೃತಿ ಕಂಡು ಬರುತ್ತಿತ್ತು. ಆದ್ದರಿಂದ ಹಳ್ಳಿಗಳಲ್ಲಿ ಬಂಡವಾಳಶಾಹೀ-ಪೂರ್ವ ಸಂಬಂಧಗಳ ಬುಡಕ್ಕೇ ಏಟು ಕೊಡುವುದು ಅಗತ್ಯ ಎನ್ನುವುದು ಸ್ಪಷ್ಟವಾಗಿತ್ತು.

"ಬ್ರಿಟಿಷ್ ಸಾಮ್ರಾಜ್ಯಶಾಹಿಯ ಮಧ್ಯ ಪ್ರವೇಶದಿಂದಾಗಿ... ಹಳ್ಳಿಗಳನ್ನು ಹಣಕಾಸಿನ ಹಾಗೂ ವ್ಯಾಪಾರೀ ಆರ್ಥಿಕತೆಯ ಕ್ಷೇತ್ರದೊಳಗೆ ಸೆಳೆದುಕೊಳ್ಳುವ ಪ್ರಕ್ರಿಯೆಯೊಂದಿಗೆ ರೈತಾಪಿ ವರ್ಗ ನಿರ್ಗತಿಕವಾಗಲು ಆರಂಭಿಸಿತು.... ಇನ್ನೊಂದೆಡೆ ವಸಾಹತುವಿನಲ್ಲಿ ತಡವಾಗಿ ಆರಂಭವಾದ ಕೈಗಾರಿಕೀಕರಣ, ಕಾರ್ಮಿಕೀಕರಣವನ್ನು ತೀವ್ರವಾಗಿ ಸೀಮಿತಗೊಳಿಸಿತು. ....ವಸಾಹತುವಿನ ಹಳ್ಳಿಯನ್ನು ತನ್ನ ಕರವಸೂಲಿ ಪದ್ಧತಿ ಹಾಗೂ ವ್ಯಾಪಾರೀ ವ್ಯವಸ್ಥೆಯೊಳಗೆ ಸೇರಿಸಿ ಬಂಡವಾಳಶಾಹೀ-ಪೂರ್ವ ಸಂಬಂಧಗಳಲ್ಲಿ ಪರಿವರ್ತನೆ [ಉದಾ: ಗ್ರಾಮವೆಲ್ಲಾ ಒಂದು ಎಂಬ ಭಾವನೆಯ ನಾಶ] ತಂದ ಬಂಡವಾಳಶಾಹಿ ಆ ಮೂಲಕ ತನಗೂ ಮೊದಲಿನ ಗುಲಾಮಿಕೆಯ, ಶೋಷಣೆಯ ಹೊರೆಯಿಂದ ರೈತರನ್ನು ವಿಮುಕ್ತಗೊಳಿಸಲಿಲ್ಲ; ಆ ಹೊರೆಗೆ ಹಣಕಾಸಿನ ಸ್ವರೂಪ ಕೊಟ್ಟಿತಷ್ಟೆ.... ಅಷ್ಟೇ ಅಲ್ಲ. ಈ ಪ್ರಕ್ರಿಯೆಯಲ್ಲಿ ಅದು ರೈತರ ಸಾಲದ ಹೊರೆಯ ಮೇಲೆ ಒಂದು ಪಾರಂಪರಿತ ಗುಲಾಮಿ ಪದ್ಧತಿಯನ್ನು ಸೃಷ್ಟಿಸಿತು."

ಈ ಜಾತಿ ಪ್ರಜ್ಞೆ ಸ್ವಾತಂತ್ರ್ಯ ನಂತರದ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿರುವಂತೆ ಕಾಣಿಸುತ್ತಿದೆ. ಚುನಾವಣೆಗಳಲ್ಲಿ, ಕೆಲವು ವಿಶೇಷ ಸವಲತ್ತುಗಳನ್ನು ಪಡೆಯಲು, ಮಂತ್ರಿಮಂಡಲಗಳಲ್ಲಿ ಸ್ಥಾನ ಪಡೆಯಲು ಅದನ್ನು ಬಹಿರಂಗವಾಗಿಯೇ ಬಳಸಲಾಗುತ್ತಿದೆ. ಆಳುವ ಪಕ್ಷ ಚುನಾವಣೆಗಳಲ್ಲಿ ಮತ ಪಡೆಯಲು ನಡೆಸುವ, ಮಂತ್ರಿಮಂಡಲದ ರಚನೆಯಲ್ಲಿ ನಡೆಸುವ ಕುಟಿಲೋಪಾಯಗಳಲ್ಲೂ ಇದನ್ನು ಉಪಯೋಗಿಸುತ್ತಿದೆ. ಈ ಜಾತಿ ವಿಚಾರ, ಜಾತಿ ಪ್ರಜ್ಞೆ ಪ್ರಜಾಪ್ರಭುತ್ವದ ಹಾಗೂ ವರ್ಗ ಹೋರಾಟಗಳಲ್ಲಿ ನುಸುಳಿ ಅವನ್ನು ಛಿದ್ರಗೊಳಿಸುತ್ತಿದೆ ಎಂಬುದು ಸ್ಪಷ್ಟ. ಅದೀಗ ಇತರ ವಿಚ್ಛಿದ್ರಕಾರೀ ಶಕ್ತಿಗಳಿಗೆ ನೆರವು ನೀಡುತ್ತಿರುವ ಸಕ್ರಿಯ ಶಕ್ತಿಗಳಲ್ಲೊಂದು.

ಜಾತಿ ಪ್ರಜ್ಞೆಯ ಕಪಿಮುಷ್ಠಿ

ಈ ಜಾತಿ ಪ್ರಜ್ಞೆಯ ದುಷ್ಟ ಪ್ರಭಾವ ಕೇವಲ ಮೇಲಿನ ಹಾಗೂ ಸುಸ್ಥಿತಿಯಲ್ಲಿರುವ ಜಾತಿಗಳ ಮೇಲೆ ಮಾತ್ರ ಸೀಮಿತಗೊಂಡಿಲ್ಲ; ಹರಿಜನೇತರ ಜಾತಿಗಳಿಗೆ ಮಾತ್ರ ಸೀಮಿತಗೊಂಡಿಲ್ಲ. ಭಾರತದಲ್ಲಿನ ಆರ್ಥಿಕ ಬದಲಾವಣೆಗಳು ಹಾಗೂ ರಾಜಕೀಯ ಪ್ರಕ್ಷೋಭೆಗಳು ಜಾತೀವಾದದ ತಳಪಾಯದ ಮೇಲೆ ಬೀರಿರುವ ಪ್ರಭಾವ ಎಷ್ಟೊಂದು ಅಲ್ಪವೆಂದರೆ ಅಸ್ಪೃಶ್ಯರು ಕೂಡ ಜಾತಿತತ್ವದ ಪ್ರಭಾವಕ್ಕೊಳಗಾಗಿದ್ದಾರೆ. ಶ್ರೀ ಜಗಜೀವನರಾಂ ತಮ್ಮ ಪುಸ್ತಕ "Caste challenge in India" ['ಭಾರತದಲ್ಲಿ ಜಾತಿಯಸವಾಲು']ದಲ್ಲಿ ಹೀಗೆ ಬರೆದಿದ್ದಾರೆ—

"ಈ ವ್ಯವಸ್ಥೆ ಎಷ್ಟೊಂದು ದುಷ್ಟ ಹಾಗೂ ಸರ್ವವ್ಯಾಪೀ ಪರಿಣಾಮ ಬೀರಿದೆಯೆಂದರೆ ದೇಶದ ಬಹುಸಂಖ್ಯಾ ಜನರು, ಹಿಂದುಳಿದ ಕೋಮುಗಳಿಗೆ ಸೇರಿದ ಜನರು, ಮೇಲ್ಜಾತಿಗಳ ಪದ್ಧತಿ ಹಾಗೂ ಆಚರಣೆಗಳನ್ನು ನಕಲು ಮಾಡುವ ಕುರಿತೇ ಹೆಚ್ಚು ಯೋಚಿಸುತ್ತಾರೆಯೇ ವಿನಃ, ತಮ್ಮನ್ನು ಬಂಧಿಸಿರುವ ಸಂಕೋಲೆಗಳನ್ನು ಮುರಿಯುವ ಬಗ್ಗೆ ಅಷ್ಟೊಂದು ಯೋಚಿಸುವುದಿಲ್ಲ. ಅಸ್ಪೃಶ್ಯರು ತಮ್ಮೊಳಗೇ ಇಷ್ಟೊಂದು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆಂದರೆ ಅದನ್ನು ಬ್ರಾಹ್ಮಣರ ಪ್ರಾಮಾಣಿಕ, ಆದರೆ ಪೇಲವವಾದ ನಕಲು ಎಂದೇ ವಿವರಿಸಬೇಕಾಗುತ್ತದೆ."

ವಾಸ್ತವದಲ್ಲಿ ಇದು ಅಸ್ಪೃಶ್ಯರ ಮೇಲೆ ಜಾತಿ ತತ್ವದ ಬಿಗಿಹಿಡಿತವನ್ನು ತೋರಿಸುತ್ತದೆ. ತಮ್ಮ ಮೇಲೆ ಅತ್ಯಾಚಾರಗಳು ನಡೆದರೂ ನೂರಾರು ವರ್ಷಗಳ ಕಾಲದ ಈ ಬಿಗಿಹಿಡಿತದಿಂದ ತಪ್ಪಿಸಿಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ. ಆಳುವ ವಿಭಾಗಗಳ ತತ್ವವಿಚಾರಗಳು ದಮನಕ್ಕೊಳಗಾದವರ ಮೇಲೆ ಆಧಿಪತ್ಯ ನಡೆಸುವ ಬಗೆಯಿದು. ಈ ರೀತಿ ದುಡಿಮೆಗಾರರ ಹೋರಾಟವನ್ನು ಅಸ್ಪೃಶ್ಯರು ಹಾಗೂ ಇತರರ ಸಮಾನತೆಯ ಹೋರಾಟವನ್ನು ಜಾತಿತತ್ವ ಛಿದ್ರಗೊಳಿಸುತ್ತದೆ. ಪ್ರಸ್ತುತ ಕಂಡು ಬರುವ ಜಾತಿಪ್ರಜ್ಞೆ ಆಳುವ ಎರಡು ವಿಭಾಗಗಳ ನಡುವಿನ ಅದೇ ವರ್ಗ ಸಖ್ಯದ ಫಲ. ಇದು ಅವರ ವರ್ಗ ಹಿತಾಸಕ್ತಿಗಳಿಗೆ ಅನುಕೂಲವಾಗಿದೆ.

ಹೊಸ ಪ್ರಜ್ಞೆಯ ಉದಯ

ಹಿಂದೆಯೇ ಹೇಳಿರುವಂತೆ, ಜಾತಿ ಹಾಗೂ ಕೋಮು ಪ್ರಜ್ಞೆಯ ವಿರುದ್ಧ ಹೋರಾಡುವ ಶಕ್ತಿಗಳೂ ರಂಗದಲ್ಲಿವೆ. ಜಾತಿ, ಧರ್ಮದ ಭೇದ-ಭಾವವಿಲ್ಲದೆ ಅವು ಜನತೆಯನ್ನು ಎಲ್ಲರಿಗೂ ಸಮಾನವಾದ ಈ ಹೋರಾಟದಲ್ಲಿ ಒಗ್ಗೂಡಿಸುತ್ತಿವೆ. ಸಾಮೂಹಿಕ ಸಂಘಟನೆಗಳು ಹಾಗೂ ಎಡ ಪಕ್ಷಗಳ ನೇತೃತ್ವದ ಸಂಯುಕ್ತ ಸಾಮೂಹಿಕ ಚಟುವಟಿಕೆಗಳು, ಸಿ.ಪಿ.ಐ. (ಎಂ.) ಹಾಗೂ ಇತರ ಎಡ ಪಕ್ಷಗಳು ನಡೆಸಿರುವ ರಾಜಕೀಯ ಪ್ರಚಾರ ಹಾಗೂ ಜ್ಞಾನ ಪ್ರಸಾರ, ಕಾರ್ಮಿಕ ವರ್ಗದ ದೀರ್ಘ ಮುಷ್ಕರಗಳು, ಉದಾಹರಣೆಗೆ- ಮುಂಬೈನ ಎರಡೂವರೆ ಲಕ್ಷ ಗಿರಣಿ ಕಾರ್ಮಿಕರ ಮುಷ್ಕರ ಹೊಸ ಪ್ರಜ್ಞೆಯನ್ನು — ಸಮಾನ ಹೋರಾಟದ ಅಗತ್ಯ ಕಂಡುಕೊಂಡಿದ್ದರಿಂದ ನೇರವಾಗಿ ಮೂಡಿದ ಪ್ರಜ್ಞೆಯನ್ನು—ರೂಪಿಸುತ್ತಿರುವ ಶಕ್ತಿಗಳು. ಆದರೆ ಮೊದಲು ಕೃತಿ— ಆಮೇಲೆ ಮಾತು ಮತ್ತು ಪ್ರಜ್ಞೆ. ಈ ಹೋರಾಟಗಳ ಅನುಭವ ತಕ್ಷಣ ಪ್ರಜ್ಞೆಯಲ್ಲಿ ಪರಿವರ್ತನೆಯನ್ನು ತರಲಾರದು. ಅದೊಂದು ನಿಧಾನಗತಿಯ ಪ್ರಕ್ರಿಯೆ, ಕೆಲವೊಮ್ಮೆ ಇದ್ದಕ್ಕಿದ್ದಂತೆ ಭುಗಿಲೆನ್ನುತ್ತದೆ. ಇನ್ನು ಕೆಲವೊಮ್ಮೆ ಹಿಂಜರಿತ ಕಾಣುತ್ತದೆ. ಪರಿಸ್ಥಿತಿ ಬದಲಾಗುತ್ತಿರುವುದರ, ಜಾತಿ-ವಿರೋಧಿ ಘರ್ಷಣೆ ಬೆಳೆಯುತ್ತಿರುವುದರ, ಬೆಳೆದು ವರ್ಗ ಹೋರಾಟದೊಂದಿಗೆ ವಿಲೀನವಾಗುತ್ತಿರುವುದರ ಇನ್ನೊಂದು ಸೂಚನೆಯೆಂದರೆ, ಗ್ರಾಮಾಂತರದಲ್ಲಿನ ಹರಿಜನರ ಹೋರಾಟ ಅದೀಗ ನೇರವಾಗಿ ಭೂಮಾಲಕರ (ಮೇಲ್ಜಾತಿಯ ಭೂಮಾಲಕರ) ವಿರುದ್ಧ ಕೃಷಿ ಕೂಲಿಗಾರರ ಹೋರಾಟದ ರೂಪ ತಾಳುತ್ತಿದೆ.

ಅಲ್ಲದೆ ಹರಿಜನರು ಈಗ ಕೇವಲ ಏಟುತಿನ್ನುತ್ತಾ ಕೂರಲು ಇಷ್ಟಪಡುತ್ತಿಲ್ಲ. ಅವರೀಗ ಪ್ರತಿ ಸವಾಲು ಹಾಕಲಾರಂಭಿಸಿದ್ದಾರೆ, ಅದಕ್ಕೆ ಪ್ರತಿಯಾಗಿ ಬೂರ್ಜ್ವಾ-ಭೂಮಾಲಕ ಆಡಳಿತದಿಂದ ದಮನ ಹಾಗೂ ರಾಕ್ಷಸೀ ಭಯೋತ್ಪಾದಕ ಕ್ರಮಗಳನ್ನು ಎದುರಿಸಬೇಕಾಗುತ್ತಿದೆ. ಆರ್ಥಿಕ ಬಿಕ್ಕಟ್ಟು, ದಟ್ಟ ದಾರಿದ್ರ್ಯ ಜನಸಾಮಾನ್ಯರಲ್ಲಿ ಹೊಸ ಜಾಗೃತಿ ಮೂಡಿಸುತ್ತಿದೆ. ಅವರು ತಮ್ಮ ಪ್ರಜಾಪ್ರಭುತ್ವವಾದೀ ಹೋರಾಟವನ್ನು ಆಗಾಗ ಪಾರಂಪಾರಿಕ (ಜಾತಿ ಇತ್ಯಾದಿ) ರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತಿದ್ದಾರೆ. ಇದನ್ನು ಜಾತೀವಾದ ಎಂದು ಪರಿಗಣಿಸದೆ, ಜಾತೀವಾದದ ವಿರುದ್ಧ ಹೋರಾಟ ಎಂದು ಪರಿಗಣಿಸಬೇಕು.

ಮೂಲಭೂತವಾದಿಗಳಿಗೆ ಅವಕಾಶ

ಮುಸ್ಲಿಂ ಜನಸಾಮಾನ್ಯರ ನಡುವೆ ಇಸ್ಲಾಮಿ ಮೂಲಭೂತವಾದ ಹಾಗೂ ಮುಸ್ಲಿಂ ಕೋಮುವಾದದತ್ತ ಹೆಚ್ಚುತ್ತಿರುವ ಒಲವು ಸದ್ಯದ ಸನ್ನಿವೇಶದ, ವರ್ಗಶಕ್ತಿಗಳ ಚಿನ್ನಾಟದ ತಾರ್ಕಿಕ ಫಲವೇ. ಪಶ್ಚಿಮ ಏಷ್ಯಾದ ದೇಶಗಳಲ್ಲಿ ಪ್ರಗತಿಶೀಲ ಪ್ರಜಾಪ್ರಭುತ್ವವಾದಿ ಹಾಗೂ ಕಾರ್ಮಿಕ ಶಕ್ತಿಗಳ ವಿರುದ್ಧ ಮತ್ತು ಸಾಮ್ರಾಜ್ಯಶಾಹಿಯ ಬಾಲಂಗೋಚಿ, ಪ್ರತಿಕ್ರಿಯಾವಾದಿ ಆಡಳಿತ ಕೂಟಗಳನ್ನು ಅಧಿಕಾರದಲ್ಲಿ ಕೂರಿಸಲು ಇಸ್ಲಾಮಿ ಮೂಲಭೂತವಾದವನ್ನು ಬಳಸಲಾಗುತ್ತಿದೆ. ಭಾರತದಲ್ಲೂ ಈ ಇಸ್ಲಾಮಿ ಮೂಲಭೂತವಾದದ ಕಡೆಗೆ ಆತುರದಿಂದ ಓಗೊಡುವ ಪರಿಸ್ಥಿತಿಯಿದೆ. ಮುಸಲ್ಮಾನರು ಬಡತನದಿಂದ ಪೀಡಿತರಾಗಿರುವುದು ಮಾತ್ರವಲ್ಲ ಭೇದಭಾವವನ್ನು ಸಹಿಸಬೇಕಾಗಿದೆ. ಅವರನ್ನು ಎರಡನೇ ದರ್ಜೆಯ ನಾಗರಿಕರಂತೆ ನಡೆಸಿಕೊಳ್ಳಲಾಗುತ್ತಿದೆ. ಅವರಲ್ಲಿ ಈಗ ತಾವು ದೇಶದ ಇತರ ಬಡತನ ಪೀಡಿತ ಜನಸಾಮಾನ್ಯರು ಅನುಭವಿಸುತ್ತಿರುವ ಸಂಕಷ್ಟಗಳನ್ನೇ ಎದುರಿಸುತ್ತಿದ್ದೇವೆ ಎಂಬ ಮನೋಭಾವದ ಬದಲು ಭಿನ್ನ ಮತನಂಬಿಕೆಗೆ ಸೇರಿದ ನಾಯಕರ ಸರಕಾರದಿಂದ ಅನ್ಯಾಯಕ್ಕೀಡಾಗುತ್ತಿದ್ದೇವೆ ಎಂಬ ಭಾವನೆಯಿದೆ. ಧಾರ್ಮಿಕ ತತ್ವ ಈಗ ಸಕ್ರಿಯವಾಗಿ ಮಧ್ಯ ಪ್ರವೇಶಿಸಿ, ಮುಸ್ಲಿಂ ಜನಸಾಮಾನ್ಯರನ್ನು ಜನತಾಂತ್ರಿಕ ಹಾಗೂ ವರ್ಗ ಹೋರಾಟದಿಂದ ದೂರ ವಿಡುತ್ತಿದೆ; ರಾಷ್ಟ್ರೀಯ ಪ್ರಜ್ಞೆಯನ್ನು ಶಿಥಿಲಗೊಳಿಸುತ್ತಿದೆ; ರಾಷ್ಟ್ರೀಯ ಐಕ್ಯತೆಯ ಎಲ್ಲಾ ಭಾವನೆಗಳನ್ನು ನಾಶಮಾಡುತ್ತಿದೆ. ಬೂರ್ಜ್ವಾ ಭೂಮಾಲಕ ಆಡಳಿತೆ ಧಾರ್ಮಿಕ, ಸಾಂಸ್ಕೃತಿಕ ಮುಂತಾದ ಯಾವುದೇ ರೀತಿಯ ಅಲ್ಪಸಂಖ್ಯಾತರಿಗೂ ನ್ಯಾಯ ದೊರಕಿಸಿಕೊಡಲಾರದು. ಬಂಡವಾಳಶಾಹೀ-ಪೂರ್ವ ತತ್ವವಿಚಾರಗಳು ಇನ್ನೂ ಜನಸಾಮಾನ್ಯರ ಪ್ರಜ್ಞೆಯ ಮೇಲೆ ಪ್ರಾಬಲ್ಯ ಹೊಂದಿರುವ ಭಾರತದಂತಹ ನವ ವಿಮೋಚಿತ ದೇಶಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ದಮನಕ್ಕೊಳಗಾಗುತ್ತಾರೆ, ಇದರಿಂದಾಗಿ ಉದ್ಭವಗೊಳ್ಳುವ ಪರಕೀಯ ಭಾವವನ್ನು ಧರ್ಮದ ಏಜೆಂಟರು ಜನಸಾಮಾನ್ಯರ ವಿರುದ್ಧ ಜನಸಾಮಾನ್ಯರನ್ನು ಎತ್ತಿಕಟ್ಟಲು ದುರುಪಯೋಗಪಡಿಸಿಕೊಳ್ಳುತ್ತಾರೆ. ದೇಶದ ಸಮಗ್ರತೆಯನ್ನು ಮುರಿಯುವ ಸಾಮ್ರಾಜ್ಯಶಾಹಿಯ ಕುಟಿಲೋಪಾಯಗಳಿಗೆ ಇದು ನೆರವು ನೀಡುತ್ತದೆ.

ಸ್ವಾತಂತ್ರ್ಯ ಪೂರ್ವ ದಿನಗಳಂತೆ ಅಲ್ಪಸಂಖ್ಯಾತರ ಪ್ರತ್ಯೇಕತಾ ಭಾವನೆ ಈಗ ಕಪೋಲಕಲ್ಪಿತ ತೊಂದರೆಗಳನ್ನು

ಸಿದ್ಧಾಂತದಲ್ಲಿ ತತ್ವವಿಚಾರಗಳ ಸ್ಥಾನ

ಬಿ. ಟಿ. ರಣದಿವೆ

ಆಧರಿಸಿರದೆ, ನಿಜವಾದ, ಜನರನ್ನು ಜೀವಂತ ಸುಡುವ ಸಂಕಷ್ಟಗಳಿಂದಾಗಿ, ಪ್ರಜಾಪ್ರಭುತ್ವ ಹಕ್ಕುಗಳ ಉಲ್ಲಂಘನೆ ಮತ್ತು ನಿರಾಕರಣೆಯಿಂದಾಗಿ ಮೂಡಿದೆ. ಆದರೆ ಮೂಲಭೂತವಾದಿಗಳು ಹಾಗೂ ಕೋಮುವಾದಿಗಳು ಅದಕ್ಕೆ ಮತೀಯ ಹಾಗೂ ಕೋಮುವಾದೀ ತಿರುವು ನೀಡಿದ್ದಾರೆ. ಆರ್.ಎಸ್.ಎಸ್. ನೇತೃತ್ವದ ಹಿಂದೂ ಕೋಮುವಾದ ಯಾವುದೇ ತೊಂದರೆಯ ಆಧಾರವಿಲ್ಲದ ನಿಷ್ಕಾರಣ ಕೋಮುವಾದಕ್ಕೆ ಉದಾಹರಣೆ. ಕೋಮು ದ್ವೇಶಕ್ಕೆ ಕುಮ್ಮಕ್ಕು ನೀಡುವ ಬಹಿರಂಗ ಕರೆ ನೀಡುತ್ತದೆ ಈ ಕೋಮುವಾದ. ಆದರೆ ಸಾವಿರಾರು ಜನ ಅದಕ್ಕೆ ಬಲಿಬೀಳುತ್ತಾರೆ ಎನ್ನುವುದು ಆಳುವ ವರ್ಗಗಳು ನಡೆಸಿರುವ ವಿನಾಶಕಾರಿ ಕೆಲಸ ಕಾರ್ಯಗಳ ಪರಿಣಾಮ ಎಷ್ಟಿದೆ ಎಂಬುದಕ್ಕೆ ಒಂದು ಅಳತೆಗೋಲು. ಸಂವಿಧಾನವೇ ತನ್ನ ನಿರ್ದೇಶಕ ಸೂತ್ರಗಳಲ್ಲಿ ಗೋಸಂರಕ್ಷಣೆಯನ್ನು ಸೇರಿಸಿ, ಹಿಂದೂ ಗೊಡ್ಡು ಸಂಪ್ರದಾಯಕ್ಕೆ ಶರಣಾಗಿದೆ.

ಕೃತಿ ಮೊದಲು, ಮಾತು ನಂತರ

ಬೂರ್ಜ್ವಾ – ಭೂಮಾಲಕ ಸಖ್ಯದಲ್ಲೇ ಅಡಕವಾಗಿರುವ ಈ ಎರಡು ವರ್ಗಗಳ ಪರಸ್ಪರ ಒಪ್ಪಂದ, ತೀವ್ರಗಾಮೀ ಭೂಸುಧಾರಣೆ ಕೈಗೊಳ್ಳಲು ನಿರಾಕರಣೆ, ಕೈಗಾರಿಕಾ ಕ್ಷೇತ್ರದ ಮುನ್ನಡೆಯಲ್ಲಿ ಮಂದಗತಿ ಇವೆಲ್ಲಾ ಒಟ್ಟು ಸೇರಿ ಇಂತಹ ತತ್ವಗಳ, ದೃಷ್ಟಿಕೋನಗಳ ಪ್ರಭಾವವನ್ನು ಜೀವಂತವಿರಿಸಿದೆ. ರಾಷ್ಟ್ರೀಯ ಏಕತೆಗೆ ತಳಪಾಯ ಹಾಕಿವಾಗಲೂ ಸಾಮ್ರಾಜ್ಯಶಾಹಿ – ವಿರೋಧೀ ಆಂದೋಲನ ಈ ದುಷ್ಟ ಪ್ರಭಾವಗಳ ವಿರುದ್ಧ ಹೋರಾಡಬೇಕಾಗಿ ಬಂದಿತ್ತು. ಈಗ ಅದೇ ಮತ್ತೆ ತಲೆಯೆತ್ತಲು ಪ್ರಯತ್ನಿಸುತ್ತಿವೆ. ವಿಚ್ಛಿದ್ರಕಾರೀ ಶಕ್ತಿಗಳು ಒಡ್ಡಿರುವ ಹೊಸ ಸವಾಲುಗಳು ಪ್ರತ್ಯೇಕತಾವಾದೀ ಬೇಡಿಕೆಗಳಿಗೆ ಎಡೆ ಮಾಡಿಕೊಟ್ಟಿವೆ. ವಿವಿಧ ಭಾಷಾ ಘಟಕಗಳನ್ನು ಒಟ್ಟಿಗೇ ನಡೆಸಿಕೊಂಡು ಹೋಗುವಲ್ಲಿ ಈ ಆಳುವ ವರ್ಗಗಳ ಕೂಟದಅಸಮರ್ಥನೆಯನ್ನು ಅಸ್ಸಾಂ, ಖಲಿಸ್ತಾನ ಇನ್ನೊಮ್ಮೆ ತೋರ್ಪಡಿಸಿವೆ. ಇಂತಹ ತತ್ವ ವಿಚಾರಗಳು ನಡೆಸಿರುವ ಈ ಆರಂಭಿಕ ಕೆಲಸಗಳನ್ನೇ ಭಾರತವನ್ನು ತುಂಡು ತುಂಡಾಗಿಸುವ ಅಮೇರಿಕಾದ ಯೋಜನೆಗಳುಅವಲಂಭಿಸಿರುವುದು.

ಇಲ್ಲೊಂದು ಪ್ರಶ್ನೆ—

"ಹಲವು ಆಫ್ರೋ–ಏಷ್ಯಾದ ದೇಶಗಳಲ್ಲಿ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯ ಭಾವನೆಯೂ ಸೇರಿದಂತೆ ಶುದ್ಧವಾದ ಧರ್ಮಾತೀತ ತತ್ವ ಹೊಂದು, ಸಾಮಾನ್ಯವಾಗಿ ಪರಂಪರೆಯಿಂದ ಕೋಮುವಾದಿಯೇ ಆದ ಜಾತಿ, ಕುಲ, ಪಂಗಡ, ಬುಡಕಟ್ಟಿನ ಅರೆ ಉಳಿಗಮಾನ್ಯ ಮತಾಂಧ ತತ್ವಗಳನ್ನು ಪಲ್ಲಟಗೊಳಿಸಿ, "ಮಾಲಕ"ರಾಗ ಬಯಸುವ, ವ್ಯಾಪಾರಿಗಳಾಗ ಬಯಸುವ ಚಿಕ್ಕ ಚಿಕ್ಕ ಆಸ್ತಿ ಒಡೆಯರ ಜೀವನ ದೈನಂದಿನ ತತ್ವಶಾಸ್ತ್ರವಾಗುವುದು, ಅದು ಕೂಡಾ ಚಾರಿತ್ರಿಕವಾಗಿ ಅಗತ್ಯವಾದ ವೇಗದಲ್ಲಿ, ಸಾಧ್ಯವಿಲ್ಲ ಎಂಬುದನ್ನು ಸಷ್ಟವಾಗಿ ತಿಳಿಯಬೇಕು. ಆದ್ದರಿಂದಲೇ, ಈ ಚಿಕ್ಕ ಚಿಕ್ಕ ಆಸ್ತಿ ಒಡೆಯರು ತಮ್ಮ ಜಾತಿ, ಕುಲ, ಪಂಗಡಗಳ ಧಾರ್ಮಿಕ, ನೈತಿಕ ಮಟ್ಟಗಳಿಗೆ ಬಲವಾಗಿ ಅಂಟಿಕೊಂಡಿರುವುದು. [ಉಲಿಯಾನೋವ್‌ಸ್ಕಿ ಹಾಗೂ ಪಾವ್ಲೋವ್]

ಈ ಹೇಳಿಕೆ ಸರಿಯೇ? ಒಂದು ಮಟ್ಟದವರೆಗೆ ಇದು ಸತ್ಯವೇನೋ ಹೌದು. ಆದರೆ ಗಮನಿಸಬೇಕಾದ ಅಂಶವೊಂದಿದೆ. ಪ್ರಜ್ಞೆಗಿಂತ ಆಚರಣೆ ಮುಂದಿದೆ. ಮೊದಲು ಬರುವುದು ಕೃತಿ.

ಭಾರತದಲ್ಲಿ ಸಂಭವಿಸುತ್ತಿರುವುದು ಇದೇ. ಕೋಮುವಾದ, ಜಾತೀವಾದ, ಧರ್ಮ ಮುಂತಾದ ವಿಚ್ಛಿದ್ರಕಾರೀ ಶಕ್ತಿಗಳು ಒಡ್ಡಿರುವ ಅಪಾಯವನ್ನು ಕಡೆಗಣಿಸುವ ಅಗತ್ಯವಿಲ್ಲ. ಈ ಅಪಾಯವನ್ನು ವಿರೋಧಿಸುತ್ತಿರುವ ಶಕ್ತಿಗಳ, ವಿಶೇಷವಾಗಿ ಕಾರ್ಮಿಕ ವರ್ಗದ ಪ್ರಜ್ಞೆಯ, ದೌರ್ಬಲ್ಯವೇನೆಂಬುದನ್ನು ಈಗಾಗಲೇ ಪರಿಶೀಲಿಸಿದ್ದೇವೆ.

ಆದರೆ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ, ರೈತಾಪಿ ವರ್ಗದ ಸಾಮೂಹಿಕ ದಾರಿದ್ರ್ಯ, ಏರು ಬೆಲೆಯ ಆಧಿಪತ್ಯ ಹಾಗೂ ಅದರ ಪರಿಣಾಮ, ಕ್ಲಿಷ್ಟಗೊಳ್ಳುತ್ತಿರುವ, ಮುರಿದು ಬೀಳುತ್ತಿರುವ ಕಾನೂನು ವ್ಯವಸ್ಥೆ ಇವೆಲ್ಲಾ ಭಾರತದ ಜನಸಾಮಾನ್ಯರನ್ನು ಕಾರ್ಯೋನ್ಮುಖರಾಗಿಸುತ್ತಿವೆ. ತಮ್ಮ ಜಾತಿ ಪ್ರಜ್ಞೆ, ಮತೀಯತೆ, ಮೂಢನಂಬಿಕೆಗಳಿದ್ದಾಗ್ಯೂ ಅದರೊಂದಿಗೇ ಅವರು ಕಾರ್ಯತಃ ಈ ಮಿತಿಗಳನ್ನು ಮೀರಿ ನಿಲ್ಲುತ್ತಿದ್ದಾರೆ; ಆಳುವ ಪಕ್ಷಗಳನ್ನು ಅಧಿಕಾರದಿಂದ ಇಳಿಸುತ್ತಿದ್ದಾರೆ; ಲಕ್ಷ–ಲಕ್ಷ ಸಂಖ್ಯೆಯಲ್ಲಿ ಸೇರಿ ಕಾಂಗ್ರೆಸ್ (ಐ)ಗೆ ಸೋಲುಣಿಸುತ್ತಿದ್ದಾರೆ; ತಮ್ಮನ್ನು ವಂಚಿಸಿದ ಪಕ್ಷದೆಡೆಗೆ ಬೆನ್ನು ತಿರುಗಿಸುತ್ತಿದ್ದಾರೆ; ಸಿ. ಪಿ. ಐ. (ಎಂ) ನೇತೃತ್ವದ ಎಡಪಕ್ಷಗಳಲ್ಲಿ ಒಮ್ಮೆ ಇಟ್ಟ ನಂಬಿಕೆಯನ್ನು ಪುನರುಚ್ಚರಿಸುತ್ತಿದ್ದಾರೆ.

ದೌರ್ಬಲ್ಯ ನೀಗಬೇಕು

ಇದೊಂದು ಪ್ರಾಥಮಿಕ ಪ್ರಕ್ರಿಯೆ. ಸಾಮಾನ್ಯ ಜನ ಅನುಭವದಿಂದ, ತಪ್ಪುಗಳನ್ನು ತಿದ್ದಿಕೊಂಡು ಕಲಿಯುತ್ತಿದ್ದಾರೆ. ಈ ಪ್ರಕ್ರಿಯೆಯ ವೇಗ ಹೆಚ್ಚಿಸಬೇಕು. ಲೆನಿನ್ ಬೋಧಿಸಿದಂತೆ, ಜನಸಾಮಾನ್ಯರ ನಿಜವಾದ ಶಿಕ್ಷಣವನ್ನು ಕ್ರಾಂತಿಕಾರೀ ಹೋರಾಟದಿಂದ ಬೇರ್ಪಡಿಸುವುದು ಸಾಧ್ಯವಿಲ್ಲ. ಈ ಹೋರಾಟದ ಅನುಭವವೇ ಪ್ರಜ್ಞೆಯನ್ನು ಬದಲಿಸುತ್ತದೆ. ಕೃಷಿಕ್ಷೇತ್ರದಲ್ಲಿ ಹೆಚ್ಚುತ್ತಿರುವ ಅಶಾಂತಿ ಸದ್ಯದಲ್ಲೇ ದೊಡ್ಡ ಸಾಮೂಹಿಕ ಹೋರಾಟಗಳು ನಡೆಯಲಿವೆ ಎಂಬ ಮುನ್ಸೂಚನೆ ಕೊಡುತ್ತಿದೆ. ಈ ಹೋರಾಟಕ್ಕೆ ಸುಸಂಬದ್ಧ ಮಾರ್ಗದರ್ಶನ ನೀಡುವ ಹೊಣೆ ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳು, ಕಾರ್ಮಿಕ ವರ್ಗ ಹಾಗೂ ಸಿ. ಪಿ. ಐ. (ಎಂ)ನ ಮೇಲಿದೆ. ಇದು ಹಾಗೂ ಜತೆಗೆ ಕಾರ್ಮಿಕ ವರ್ಗದ ಕಾರ್ಯಾಚರಣೆ ದೇಶದಲ್ಲಿ ಸದ್ಯದ ಪ್ರಜ್ಞೆಯ ಸಮತೋಲನದಲ್ಲಿ ಪರಿವರ್ತನೆ ತರಲಿದೆ.

ಆದರೆ ಅದೇ ವೇಳೆ, ಕಾರ್ಮಿಕ ವರ್ಗ ಹಾಗೂ ಕಮ್ಯೂನಿಸ್ಟ ಆಂದೋಲನ ಇನ್ನೂ ಕಾಡುತ್ತಿರುವ ತಮ್ಮ ದೌರ್ಬಲ್ಯಗಳನ್ನು ಮೆಟ್ಟಿನಿಲ್ಲಬೇಕು. ಸಾಮಾಜಿಕ ಹೋರಾಟಗಳಲ್ಲಿ ತಲೆಹಾಕಿ ಅವನ್ನು ಛಿದ್ರಗೊಳಿಸುವ ಆಳುವ ವರ್ಗಗಳ ತತ್ವ ವಿಚಾರಗಳನ್ನು ಅವುಗಳ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸದೆ ಸೋಲಿಸಲು ಸಾಧ್ಯವಿಲ್ಲ. ಜನ ಸಾಮಾನ್ಯರ ಪ್ರಾಯೋಗಿಕ ಕಾರ್ಯ ಚಟುವಟಿಕೆಗಳೊಂದಿಗೇ ಈ ಸೈದ್ಧಾಂತಿಕ ಹೋರಾಟವೂ ನಡೆಯಬೇಕು. ಈ ಕರ್ತವ್ಯ ನಿಭಾಯಿಸುವಲ್ಲಿ, ಮತ ಧರ್ಮಗಳ ಹಾಗೂ ಭಾರತದಲ್ಲಿ ಅವುಗಳ ಪ್ರತಿಕ್ರಿಯಾವಾದೀ ಸಾಮಾಜಿಕ ಅವತಾರಗಳ ಭೌತವಾದೀ ವಿಮರ್ಶೆ ನಡೆಸುವಲ್ಲಿ ಕಮ್ಯುನಿಸ್ಟ್ ಹಾಗೂ ಎಡಪಂಥೀಯ ಆಂದೋಲನಗಳು ತೀರಾ ದುರ್ಬಲವಾಗಿವೆ. ಬೂರ್ಜ್ವಾ ನಾಯಕತ್ವ ಈ ಹೊಣೆಯನ್ನು ನಿಭಾಯಿಸಲಿಲ್ಲ. ಕಾರ್ಮಿಕ ವರ್ಗದ ಚಳವಳಿಯೂ ಇದನ್ನು ನಿರ್ಲಕ್ಷಿಸಿತು. ಪ್ರತಿಕ್ರಿಯಾವಾದಿ ತತ್ವ ವಿಚಾರಗಳ ಪ್ರತಿಪಾದನೆಗಳ ಬುಡಕ್ಕೇ ಏಟುಕೊಡದೆ, ಕೇವಲ ಸಮಸ್ಯೆಗಳು ಎದುರು ನಿಂತಾಗ ಮಾತ್ರ ಅವುಗಳನ್ನು ತಾತ್ಕಾಲಿಕವಾಗಿ ಪರಿಹರಿಸುವ ಮನೋಭಾವ ಗೊಂದಲಕ್ಕೆ ಹಾಗೂಕಾರ್ಯದಲ್ಲಿ ಸಮಯ ಸಾಧಕತನಕ್ಕೆ ಎಡೆ ಮಾಡಿಕೊಟ್ಟಿದೆ. ಈ ದೌರ್ಬಲ್ಯವನ್ನು ಮೆಟ್ಟಿ ನಿಲ್ಲಬೇಕು.

ಭಾರತದ ಜನತೆಯ ಮೇಲೆ ಪ್ರಭಾವ ಬೀರುವ ತತ್ವ ವಿಚಾರಗಳು ಮತೀಯತೆ, ಜಾತೀವಾದ ಕೋಮುವಾದ–ಎಲ್ಲಾ ಸಮಾಜಗಳಂತೆ ಇಲ್ಲಿಯೂ ಸಮಾಜದ ಆರ್ಥಿಕ ಬೆಳವಣಿಗೆಯ ಪ್ರಭಾವಕ್ಕೆ ಒಳಗಾಗಿವೆ. ಅವು ತುಸು ವ್ಯತ್ಯಾಸಗೊಂಡೋ ಅಥವಾ ಪರಿವರ್ತಿತ ಸ್ವರೂಪದಲ್ಲೋ ಇನ್ನೂ ಕಾರ್ಯನಿರ್ವಹಿಸುತ್ತಲೇ ಇವೆ. ಯಾಕೆಂದರೆ ಭಾರತೀಯ ಸಮಾಜದಲ್ಲಿ ಇನ್ನೂ ಕ್ರಾಂತಿಕಾರೀ ಪರಿವರ್ತನೆ ಸಂಭವಿಸಿಲ್ಲವಾದ್ದರಿಂದ ಅವನ್ನು ಪೋಷಿಸುವ ಪರಿಸರ ಇನ್ನೂ ಅಸ್ತಿತ್ವದಲ್ಲಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಅವು ಆಳುವ ವರ್ಗಗಳ–ಬೂರ್ಜ್ವಾ ಭೂಮಾಲಕ ಕೂಟದ ಅಗತ್ಯಗಳನ್ನೂ ಪೂರೈಸುತ್ತವೆ; ದೇಶದ ಐಕ್ಯತೆಯನ್ನು ಮುರಿಯುವ ಸಾಮ್ರಾಜ್ಯಶಾಹಿಗಳ ಕುಟಿಲೋಪಾಯಗಳಿಗೆ ನೆರವು ನೀಡುತ್ತಿವೆ.

ಪ್ರತಿಕ್ರಿಯಾವಾದೀ ತತ್ವ ವಿಚಾರಗಳು ನಡುವೆ ತಲೆಹಾಕದಂತೆ ಅವನ್ನು ಎದುರಿಸಬೇಕಾದರೆ ಜನತೆಯ ಪ್ರಜಾಸತ್ತಾತ್ಮಕ ಹಾಗೂ ಕ್ರಾಂತಿಕಾರಿ ಹಿತಾಸಕ್ತಿಗಳನ್ನು ಪೋಷಿಸುವ ತತ್ವಗಳು ಕ್ರಿಯಾತ್ಮವಾಗಿ ಮಧ್ಯಪ್ರವೇಶಿಸಬೇಕು. ಈ ತಾತ್ವಿಕ ಹೋರಾಟದ ಬಗ್ಗೆ ಬೂರ್ಜ್ವಾ-ಭೂಮಾಲಕ ಪಕ್ಷಗಳೆಲ್ಲಾ ಉದಾಸೀನವಾಗಿವೆ. ಪ್ರಜಾಪ್ರಭುತ್ವವಾದಿ ಹಾಗೂ ಕಾರ್ಮಿಕ ವರ್ಗ ಶಕ್ತಿಗಳು ಸಾಮೂಹಿಕ ಹೋರಾಟಗಳ ನೇತೃತ್ವ ವಹಿಸುವುದರೊಂದಿಗೇ ಒಂದೊಂದಾಗಿ ಈ ಪ್ರತಿಕ್ರಿಯಾವಾದೀ ತತ್ವಗಳ ಮೇಲೆ ಸುಂಯೋಜಿತ ದಾಳಿ ನಡೆಸಬೇಕು.

(ಮುಗಿಯಿತು)

ಶಿವಮೊಗ್ಗ

ಮಾರ್ಕ್ಸ್ ಶತಾಬ್ಧಿ ಆಚರಣೆ

ಶಿವಮೊಗ್ಗ ನಗರದ "ಪುರೋಗಾಮಿ ಗೆಳೆಯರು" ದಿನಾಂಕ 23-3-1983 ರಂದು ಸಂಜೆ ಅಶೋಕ ಹೋಟೆಲ್ ಸಭಾಂಗಣದಲ್ಲಿ ಭಗತ್‌ಸಿಂಗ್‌ರವರು ಹುತಾತ್ಮರಾದ 53ನೇ ವರ್ಧಂತಿ ಮತ್ತು ಕಾರ್ಲ್‌ಮಾರ್ಕ್ಸ್‌ರವರ ಶತಾಬ್ಧಿಯನ್ನು ಆಚರಿಸಿದರು.

ನಗರದ ಕಾರ್ಮಿಕ ಸಮನ್ವಯ ಸಮಿತಿಯ ಕೆ. ಲಕ್ಷ್ಮೀನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕ್ರಾಂತಿಭಗತ್ ಪತ್ರಿಕೆಯ ಸಂಪಾದಕ ಎಂ. ಲಿಂಗಪ್ಪ, ನಗರಸಭಾ ಸದಸ್ಯ ಹಾಗೂ ಖ್ಯಾತ ನ್ಯಾಯವಾದಿ ಜಿ. ಎನ್. ನಾಗರಾಜ್, ಅಂಚೆ ತಂತಿ ಇಲಾಖೆಯ ಮಂಜುನಾಥ್, ಅಖಿಲ ಭಾರತ ಯುವಜನ ಫೆಡರೇಷನ್‌ನ ಎ. ಕೆ. ನಾಗೇಶ, ದಯಾನಂದ, ರಸ್ತೆ ಸಾರಿಗೆ ಸಂಸ್ಥೆಯ ಜಿ. ಚಂದ್ರಪ್ಪ, ನಾಗರಿಕ ವೇದಿಕೆಯ ಗು. ಸಾ. ಸತ್ಯನಾರಾಯಣ ಮೊದಲಾದ ಗೆಳೆಯರು ಮಾತನಾಡಿದರು.

ಮೊದಲಿಗೆ ವಿಚಾರಿ ವಾರಪತ್ರಿಕೆ ಸಂಪಾದಕ ಆರ್. ಗೋಪಾಲ ನಾಯಕ್ ಸ್ವಾಗತಿಸುತ್ತಾ ಸಮಾರಂಭದ ಉದ್ದೇಶವನ್ನು ವಿವರಿಸಿದರು. ಕೊನೆಯಲ್ಲಿ ದಯಾನಂದ ವಂದಿಸಿದರು.

ಹಂಚಿನಾಳ ಗ್ರಾಮದ ವಸತಿಹೀನರಿಂದ 22 ಕಿ.ಮೀ. ಕಾಲ್ನಡಿಗೆ ಜಾಥಾ

ದಿ. 15–4–83ರಂದು ಹಂಚಿನಾಳ ಗ್ರಾಮ ನಿವೇಶನ ರಹಿತ ಹೋರಾಟ ಸಮಿತಿ ಕರೆಯ ಮೇರೆಗೆ ಸವದತ್ತಿ ತಹಶೀಲ್ದಾರ್‌ರವರ ಕಛೇರಿಗೆ 22 ಕಿ. ಮೀ. ಉದ್ದದ ಕಾಲ್ನಡಿಗೆ ಜಾಥಾ ಯಶಸ್ವಿಯಾಗಿ ನೆರವೇರಿತು. ಒಂದು ನೂರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದ ಈ ಜಾಥಾದಲ್ಲಿ ಲಂಬಾಣಿ ಜನರೇ ಬಹು ಸಂಖ್ಯೆಯಲ್ಲಿದ್ದರೂ ಇತರ ಹಿಂದುಳಿದ ಜನಾಂಗದವರೂ ಸೇರಿದ್ದರು. ಬೇಸಿಗೆ ಉರಿಬಿಸಿಲಿಗೂ ಎದೆಗುಂದದೇ ಬಗಲಲ್ಲಿ ಕೂಸು ಹೊತ್ತು, ಮತ್ತೊಂದು ಕೈಯಲ್ಲಿ ಬುತ್ತಿಗಂಟು ಹಿಡಿದು ಮೂವತ್ತೈದು ಲಂಬಾಣಿ ಸ್ತ್ರೀಯರೂ, ಅದರಂತೆಯೇ ಎಂಟ್ಹತ್ತು ವಯಸ್ಸಿನ ಹದಿನೈದು ಹುಡುಗರೂ ಉತ್ಸಾಹದಿಂದ ಘೋಷಣೆ ಕೂಗುತ್ತ ಸಾಗಿದ ದೃಶ್ಯ ಹುರುಪು ಹುಟ್ಟಿಸುವಂಥದ್ದಾಗಿತ್ತು. ಹಿರೇತುಂಬಿ, ಉಗರಗೋಳಗಳ ಮೂಲಕ ಹಾದು ಯಲ್ಲಮ್ಮನ ಗುಡ್ಡದಲ್ಲಿ ತಂಗಿ ಬರುವಾಗ ಮಾರ್ಗದಲ್ಲಿ ಹಲವೆಡೆ ಸಭೆಗಳನ್ನೇರ್ಪಡಿಸಲಾಯಿತು. ವಿಶೇಷವೆಂದರೆ ಮೆರವಣಿಗೆಯಲ್ಲಿದ್ದ ಜನರಿಗೆ ಹೊಸ ಚೈತನ್ಯ ಮೂಡಿ ಅವರ ಮಧ್ಯದಿಂದಲೇ "ಮನೆ ಕೊಡಿ, ಇಲ್ಲವೇ ಗುಡಿಸಲಿಗೆ ನಡಿ" ಮುಂತಾದ ಹೊಸ ಘೋಷಣೆಗಳು ಹುಟ್ಟಿದುವು.

ಸವದತ್ತಿಯಲ್ಲಿ ತಹಶೀಲ್ದಾರರ ಕಛೇರಿಯ ಎದುರು ಎರಡು ತಾಸು ಧರಣಿ ಸತ್ಯಾಗ್ರಹ ನಡೆಸಿದ ಬಳಿಕ, ಬೆಳಗಾವಿ ಜಿಲ್ಲಾ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾ। ನಿತ್ಯಾನಂದ ಸ್ವಾಮೀಜಿ, ಜಾಥಾ ಸಂಚಾಲಕರಾದ ಕಾ। ಎಲ್. ಎಸ್. ನಾಯಕ, ಕಾ। ಗಂಗಾಧರ ಗಾಡದ, ಕಾ। ಬಸವರಾಜ ಸವದತ್ತಿ, ಕಾ। ಕಪ್ಪಣ್ಣನವರ ಹಾಗೂ ಇತರರು ಅಧಿಕಾರ ವರ್ಗವನ್ನು ಭೇಟಿಯಾಗಿ ಮನವಿ ಪತ್ರ ಸಲ್ಲಿಸಿ ಚರ್ಚೆ ನಡೆಸಿದರು. ಐದು ವರ್ಷಗಳ ಹಿಂದೆಯೇ ಪ್ರತಿಯೊಬ್ಬರಿಂದ ರೂ. 500 ಸಂಗ್ರಹಿಸಿದ್ದರೂ ಇದುವರೆಗೆ ನಿವೇಶನ ಹಂಚುವಲ್ಲಿ ವಿಳಂಬ ನಡೆಸಿದುದನ್ನು ಉಗ್ರವಾಗಿ ಖಂಡಿಸಲಾಯಿತು. ಹಂಚಿನಾಳ ಗ್ರಾಮಕ್ಕೆ ಸಂಬಂಧಿಸಿದ ಇತರ ಬೇಡಿಕೆಗಳ ಬಗ್ಗೆಯೂ ಚರ್ಚಿಸಲಾಯಿತು. ಎಂಟು ದಿನಗಳೊಳಗಾಗಿ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಉಪವಾಸ ಸತ್ಯಾಗ್ರಹ ನಡೆಸುವ ಎಚ್ಚರಿಕೆಯನ್ನೂ ಕೊಡಲಾಯಿತು. ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾ। ನಿತ್ಯಾನಂದಸ್ವಾಮೀಜಿ ಕಾ। ಸುಧೀಂದ್ರ ಕುಲಕರ್ಣಿ, ಕಾ। ಸವದತ್ತಿಯವರು ಮಾತನಾಡಿದರು.

[illegible] ಕಾ। [illegible] ಹಾಗೂ ಕಾ। ಸವದತ್ತಿಯವರು ಕ್ರಾಂತಿ ಗೀತೆಗಳನ್ನು ಹಾಡಿದರು,

ಹರಪನಹಳ್ಳಿ :

ರೈತರ ಬೃಹತ್ ಮೆರವಣಿಗೆ

ಬರಗಾಲ ಪೀಡಿತ ಬೇಂಕಿಯಲ್ಲಿ ಬಳಲುತ್ತಿರುವ ಹರಪನಹಳ್ಳಿ ತಾಲೂಕಿನ ಹಳ್ಳಿಗಳಾದ ಹೀರೆಮಾಗಳ ಕೇರಿ, ಶಿಂಗ್ರಿಹಳ್ಳಿ, ಸತ್ತೂರು, ಕಾಗಿಮಸಲವಾಡ, ಹಳ್ಳಿಕೇರಿ, ಶಂಕರನಹಳ್ಳಿ, ತುಂಬಿಕೆರೆ ಇನ್ನೂ ಮುಂತಾದ ಹಳ್ಳಿಗಳಿಗೆ 1981 ರಲ್ಲಿ ಭದ್ರಾ ಜಲಾಶಯ ಯೋಜನೆಯಿಂದ ನೀರಾವರಿ ಸೌಲಭ್ಯ ಸರಕಾರದ ವತಿಯಿಂದ ಮಂಜೂರಾಗಿತ್ತು. ಸುಮಾರು 15,000 ಎಕರೆ ಜಮೀನಿಗೆ ನೀರುಣಿಸುವುದಾಗಿತ್ತು. ಸಂಬಂಧಪಟ್ಟ ಕಛೇರಿಗೆ 40 ಲಕ್ಷ ರೂ. ಬಿಡುಗಡೆಯಾಗಿತ್ತು, ಆದರೆ ಕೆಲವು ಭೂಮಾಲಿಕರು, ರಾಜಕೀಯ ಹಿತಾಸಕ್ತಿಗಳು ಹಾಗೂ ಅಧಿಕಾರಿಗಳು ಈ ಹಳ್ಳಿಗಳ ಅಭಿವೃದ್ಧಿಗೆ ಕಂಟಕಪ್ರಾಯರಾಗಿದ್ದಾರೆ. ದಿನಾಂಕ 25-3-83 ರಂದು ಈ ಭಾಗದ ರೈತರೆಲ್ಲ ಸಂಘಟಿತರಾಗಿ ಸಂಬಂಧಪಟ್ಟ ಕಛೇರಿಗೆ ಪ್ರತಿಭಟನಾ ಮೆರವಣಿಗೆಯನ್ನು ತೆಗೆದರು. ಮೆರವಣಿಗೆಯು ಹರಪನಹಳ್ಳಿ ತಾಲ್ಲೂಕಿನಿಂದ ದಾವಣಗೆರಿವರೆಗೆ ಮೆರವಣಿಗೆ ಸಾಗಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಅರ್ಪಿಸಿ ಮುಂದಿನ ತಿಂಗಳೊಳಗಾಗಿ ವಿಳಂಬವಾಗಿರುವ ಕಾರ್ಯವನ್ನು ಕಾರ್ಯಗತಗೊಳಿಸಬೇಕೆಂದು ಕೇಳಿಕೊಂಡರು. ಈ ನ್ಯಾಯಯುತ ಬೇಡಿಕೆಗಳು ಈಡೇರದಿದ್ದಲ್ಲಿ ಉಪವಾಸ ಸತ್ಯಾಗ್ರಹಗಳನ್ನು ನಡೆಸುತ್ತೇವೆ ಎಂದು ತಿಳಿಸಿದ್ದಾರೆ. ಜಾಥಾ ನಡೆಯುವಾಗ ಕೆಲವು ಭೂಮಾಲೀಕರು ರಾಜಕೀಯ ವ್ಯಕ್ತಿಗಳು ತಡೆದು ಚಳುವಳಿಯನ್ನು ಮುರಿಯಲು ಬಂದರು. ಆದರೆ ಸಿಟ್ಟಿಗೆದ್ದ ರೈಟರು ಅವರಿಗೆ ಧಿಕ್ಕಾರ ಹಾಕಿ ಮುಂದೆ ಸಾಗಿದರು.

ಸಾಯಂಕಾಲ 5-30ಕ್ಕೆ ದಾವಣಗೆರೆಯ ಮುನ್ಸಿಪಲ್ ಪಾರ್ಕ್‌ನಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ರೈತ ಸಂಘದ ಸಂಚಾಲಕರಾದ ಕಾ। ಪರಶುರಾಂ ಮಾತನಾಡಿದರು. ನಂತರ ಜಿಲ್ಲಾ ಕಾರ್ಯದರ್ಶಿ ಕಾ। ಪಿ. ಆರ್. ವೆಂಕಟೇಶ್ ಮಾತನಾಡಿದರು.

ನಂತರ ಹರಪನಹಳ್ಳಿ ತಾಲ್ಲೂಕಿನ ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಅಧ್ಯಕ್ಷರಾದ ಕಾ। ಕ್ರಿಷ್ಣಾಜಿಕಲಾಲ್ "ರೈತರ ಹೋರಾಟಕ್ಕೆ S.F.I.ನ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದರು". ಕೊನೆಯಲ್ಲಿ ಶಂಕರನಹಳ್ಳಿ ರೈತ ಸಂಘದ ಸದಸ್ಯರಾದ ಪಿ. ದುರುಗಪ್ಪ ಕ್ರಾಂತಿಕಾರಿ ವಂದನೆಗಳನ್ನು ಸಲ್ಲಿಸಿದರು.

ರೈತ ಸಂಘ ಪ್ರಾರಂಭ

ದಿನಾಂಕ 22-3-1983ರಂದು ಹರಪನಹಳ್ಳಿ ತಾಲ್ಲೂಕ್ ಸಿಂಗ್ರಿಹಳ್ಳಿ ಗ್ರಾಮದಲ್ಲಿ ರೈತ ಸಂಘದ ಸ್ಥಾಪನೆ ಮಾಡಲಾಯಿತು. ದಿ. 21-3-83 ರಂದು ಹಳ್ಳಿಯ ಬಡ ರೈತರೂ ರೈತ ಕಾರ್ಮಿಕರೆಲ್ಲರೂ ಸಭೆ ಸೇರಿದ್ದು ಸಭೆಯನ್ನುದ್ದೇಶಿಸಿ ತಾಲ್ಲೂಕು ಸಂಚಾಲಕ ಕಾ। ಬಿ. ಪರಶುರಾಮ ಮಾತಾಡುತ್ತ ಬದಲಾಗಿರುವ ರಾಜಕೀಯ ಪರಿಸ್ಥಿತಿಯನ್ನು ವಿವರಿಸುತ್ತಾ ಹಳ್ಳಿಯನ್ನು ಭಾದಿಸುತ್ತಿರುವ ಸಮಸ್ಯೆಗಳಿಗೆ ಐಕ್ಯಹೋರಾಟಕ್ಕೆ ಕರೆ ಕೊಟ್ಟರು. ದಿ. 23-3-83ರಂದು ಕಾರ್ಯಕಾರಿ ಕಮಿಟಿಯನ್ನು ಚುನಾಯಿಸಲಾಯಿತು.

ಇ. ಲಕ್ಷ್ಮಣ ಅಧ್ಯಕ್ಷರು

ಟಿ. ಶೇಖರಪ್ಪ ಉಪಾಧ್ಯಕ್ಷರು

ಬಿ. ದೇವೇಂದ್ರಪ್ಪ ಪ್ರಧಾನ ಕಾರ್ಯದರ್ಶಿ.

ವಿ. ದುರುಗಪ್ಪ ಸಹ ಕಾರ್ಯದರ್ಶಿ.

ವಾಮದೇವಪ್ಪ ಖಜಾಂಚಿ

ಶೇಷಣ್ಣ ಸಂಚಾಲಕ

ಹಾಗೂ 19 ಜನರ ಕಾರ್ಯಕಾರಿ ಸದಸ್ಯರನ್ನು ಆರಿಸಲಾಯಿತು.

ಪಂಚಾಯತ್ ಅಧ್ಯಕ್ಷರಿಂದ ಹರಿಜನರ ಮೇಲೆ ಹಲ್ಲೆ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕಂದಾವರ ಗ್ರಾಮ ಪಂಚಾಯತ್ ಅಧ್ಯಕ್ಷರ ಮನೆಯಲ್ಲಿ ಹಿಂದಿ "ಉತ್ಸವ" ಚಿತ್ರದ ಚಿತ್ರೀಕರಣವನ್ನು (ಸಿನೆಮಾ ಶೂಟಿಂಗ್) ತೆಗೆಯಲು ಅವಕಾಶ ಕೊಟ್ಟಿರುತ್ತಾರೆ. ಚಿತ್ರೀಕರಣವನ್ನು ನೋಡಲು ಸಾವಿರಾರು ಜನರು ಬರುತ್ತಿದ್ದರು. ಇವರೊಂದಿಗೆ ಮಾರ್ಗೋಳಿಯ ದಲಿತ (ಕರ್ನಾಟಕ ರಾಜ್ಯ ಸರಕಾರಿ ನೌಕರ) ಶೂಟಿಂಗ್ ನೋಡಲು ಹೋದರು.

ಆದರೆ ಕೆಲವು ದಿನದ ನಂತರ (5-4-83ರಂದು) ಅದೇ ಅಧ್ಯಕ್ಷರು ಆತನನ್ನು ರಸ್ತೆಯಲ್ಲಿ ಅಡ್ಡಗಟ್ಟಿ ಸಾರ್ವಜನಿಕರ ಮುಂದೆ ಹಲ್ಲೆ ನಡೆಸಿದರು. ನೀನು ಒಬ್ಬ ಹರಿಜನನಾಗಿ ನನ್ನ ಮನೆ ಪ್ರವೇಶಿಸಲು ನಿನಗೆ ಹೇಗೆ ಧೈರ್ಯ ಬಂತು ಎಂದು ಅವಾಚ್ಯವಾಗಿ ಬೈದು ಬಲಾತ್ಕಾರವಾಗಿ ಮನೆಗೆ ಕರೆದುಕೊಂಡು ಹೋಗಿ ಎಲ್ಲರ ಎದುರು ತಪ್ಪಾಯಿತೆಂದು ಪ್ರಮಾಣಪೂರ್ವಕವಾಗಿ ತಂಳಿಸಿ ಕಟ್ಟೆಯನ್ನು ಮುಟ್ಟಲು ಬಲವಂತ ಮಾಡಿದರು.

ಈ ವಿಷಯ ತಿಳಿದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.)ನ ಕಾರ್ಯಕರ್ತರು ಮಾರ್ಗೋಳಿಯಲ್ಲಿ ಸಭೆ ಕರೆದು ಈ ಘಟನೆಯ ಬಗ್ಗೆ ಪ್ರಾಮಾಣಿಕವಾಗಿ ತನಿಖೆ ನಡೆಸಬೇಕೆಂದು ಸಂಬಂಧಪಟ್ಟವರಿಗೆ ಮನವಿ ಮಾಡಿಕೊಂಡಿದ್ದಾರೆ.

ಬಿಜಾಪುರ :

ರೈತ ಸಂಘದ ಸಭೆ

ದಿನಾಂಕ 10-4-83ರಂದು ಬಿಜಾಪುರ ಜಿಲ್ಲಾ ರೈತ ಸಂಘದ ಸರ್ವ ಸದಸ್ಯರ ಸಭೆ ನಡೆದು ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು

1. ಬಿಜಾಪುರ ಜಿಲ್ಲೆಯನ್ನು ಬರಗಾಲಪೀಡಿತ ಪ್ರದೇಶವೆಂದು ಸಾರಲಾಗಿದ್ದರೂ ಸರ್ಕಾರ ಯಾವುದೇ ಪರಿಹಾರ ಕಾರ್ಯಗಳನ್ನು ಕೈಗೊಂಡಿಲ್ಲ. ಸರ್ಕಾರ ಕೂಡಲೇ ನೀರು, ಆಹಾರ ಧಾನ್ಯ, ದನಗಳಿಗೆ ಮೇವು ಮುಂತಾದುವನ್ನು ಒದಗಿಸಬೇಕು.

2. ಪಿ. ಎಲ್. ಡಿ. ಬ್ಯಾಂಕ್ ಸಹಕಾರ ಸಂಘಗಳಿಂದ ರೈತರು ಸಾಲ ಪಡೆದುಕೊಂಡಿದ್ದು ಸರ್ಕಾರ ಬರಗಾಲ ಪ್ರದೇಶವೆಂದು ಘೋಷಿಸಿದ್ದರೂ ಕೂಡ ಸಂಬಂಧಿಸಿದ ಅಧಿಕಾರಿಗಳು ಸಾಲ ವಸೂಲಿ ನೋಟೀಸ್ ಕೊಟ್ಟು ರೈತರನ್ನು ಹೆದರಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

3. ಬಿಜಾಪುರ ಜಿಲ್ಲೆಗೆ ಕೆರೆಗಳು ಮಂಜೂರಾಗಿದ್ದು ತೀವ್ರವಾಗಿ ಕೆರೆ ಕಟ್ಟುವ ಕೆಲಸ ಪ್ರಾರಂಭಿಸಬೇಕು

4. ಜಮಖಂಡಿ ತಾಲ್ಲೂಕಿನ ಹಿಪ್ಪರಗಿ ಅಣೆಕಟ್ಟೆಯ ಕೆಲಸ ಪ್ರಾರಂಭಿಸಬೇಕು

5, ರೈತರ ಮೇಲಿನ ಭೂಮಾಲೀಕರ ದಬ್ಬಾಳಿಕೆ ನಿಲ್ಲಬೇಕು.

6. ಬರಗಾಲಕ್ಕೆ ತುತ್ತಾಗಿರುವ ತಾಲ್ಲೂಕುಗಳಲ್ಲಿ ಕೂಡಲೇ ಬರಗಾಲ ಕಾಮಗಾರಿ ತೀವ್ರಗತಿಯಲ್ಲಿ ಪ್ರಾರಂಭಿಸಬೇಕು.

7. ಬಿಜಾಪುರ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಎಂ. ಐ. ಪಾಟೀಲ್ ಅವರು ರೈತರಿಂದ ಅಕ್ರಮವಾಗಿ ಹಣ ಪಡೆದಿದ್ದು ಅವರನ್ನು ಕಾರ್ಯದರ್ಶಿ ಸ್ಥಾನದಿಂದ ವಜಾಮಾಡಿ ಶ್ರೀ ಸಿ. ಬಿ. ಮಣೂರ ಅವರನ್ನು ಪ್ರಧಾನಕಾರ್ಯದರ್ಶಿಯನ್ನಾಗಿ ನೇಮಿಸಲಾಯಿತು, ಮತ್ತು ಖಜಾಂಚಿಯಾಗಿ ಕೆ. ವೈ. ವಾಲಿಕಾರಸಾ ಶವನಗಿ ಅವರನ್ನು ನೇಮಿಸಲಾಯಿತು.

ಪ್ರಕಟನೆ

ಬಿಜಾಪುರ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಬಿ. ಮಣೂರು ಅವರು ಈ ಕೆಳಗಿನ ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ.

ರೈತ ಸಂಘದ ಮಾಜೀ ಕಾರ್ಯದರ್ಶಿ ಎಂ. ಐ. ಪಾಟೀಲ್ ದಿನಾಂಕ 10-4-1983ರಂದು ಪತ್ರಿಕಾ ಪ್ರಕಟನೆ ಹೊರಡಿಸಿ ರೈತ ಸಂಘದಲ್ಲಿ ಸರ್ವಾಧಿಕಾರ ಇರುವುದಾಗಿಯೂ, ಪ್ರಜಾಪ್ರಭುತ್ವ ಇಲ್ಲವೆಂದೂ ಹೇಳಿಕೆ ನೀಡಿರುವುದು ಕುಚೇಷ್ಟೆಯ ಕೃತ್ಯ ಹಾಗೂ ಸತ್ಯಕ್ಕೆ ದೂರವಿದೆ.

ಸಂಘದಲ್ಲಿ ಪ್ರತಿಯೊಬ್ಬ ರೈತನಿಗೂ ಮತ್ತು ಸದಸ್ಯನಿಗೂ ಯಾವುದೇ ವಿಷಯ ಕೇಳುವ ಅವಕಾಶ ಇರುತ್ತದೆ.

ತಾ॥ 10-4-1983ರಂದು ರೈತ ಸಂಘದ ಸರ್ವ ಸದಸ್ಯರ ಸಭೆ ಕರೆದಿದ್ದು ಈ ಸಭೆಗೆ ಎಂ.ಐ. ಪಾಟೀಲ್ ಹಾಜರಾಗಿ ರೈತರಿಂದ ಮೋಸಮಾಡಿ ಹಣ ತೆಗೆದುಕೊಂಡದ್ದನ್ನು ಒಪ್ಪಿಕೊಂಡು ಸದರೀ ರೈತರ ಹಣವನ್ನು ಒಂದು ತಿಂಗಳೊಳಗೆ ಹಿಂತಿರುಗಿಸುವುದಾಗಿ ಬರೆದು ಕೊಟ್ಟಿರುತ್ತಾರೆ. ಅಲ್ಲದೆ ಮುಂದೆ ಇಂಥ ಘಟನೆ ಸಂಭವಿಸಿದರೆ ಅಧ್ಯಕ್ಷರು ತಮ್ಮ ಮೇಲೆ ಕ್ರಮ ಕೈಗೊಳ್ಳಲು ಅಧಿಕಾರ ಕೊಟ್ಟಿರುತ್ತಾರೆ.

ಈ ಎಲ್ಲಾ ಆರೋಪಗಳ ಕಾರಣದಿಂದಾಗಿ ಎಂ. ಐ. ಪಾಟೀಲ್ ಅವರನ್ನು ಕಾರ್ಯದರ್ಶಿ ಸ್ಥಾನದಿಂದ ವಜಾ ಮಾಡಲಾಗಿದೆ. ಶ್ರೀ ಎಂ. ಐ. ಪಾಟೀಲರು ತಾನು ಕಾರ್ಯದರ್ಶಿ ಎಂದು ಹೇಳಿಕೊಂಡು ರೈತರಿಂದ ಹಣ ವಸೂಲಿ ಮಾಡಿದರೆ ಅದಕ್ಕೆ ರೈತ ಸಂಘ ಜವಾಬ್ದಾರಿಯಲ್ಲ ಎಂಬುದನ್ನು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ಸೋವಿಯತ್ ಯೂನಿಯನ್ ಕಾರ್ಮಿಕರಿಂದ ಸಂದೇಶ

(3ನೇ ಪುಟದಿಂದ)

ಹೆಚ್ಚಿಸಲಾಯಿತು. ಮಕ್ಕಳಿರುವ ಕುಟುಂಬಗಳಿಗೆ ಹೆಚ್ಚು ಧನಸಹಾಯ ಮಾಡುವ ಕಾರ್ಯಕ್ರಮ ಮುಂದುವರಿದಿದೆ.

ಸೋವಿಯತ್ ಯೂನಿಯನ್ನಿನ ಟ್ರೇಡ್ ಯೂನಿಯನ್‌ಗಳಲ್ಲಿ 1320 ಲಕ್ಷ ಸದಸ್ಯರಿದ್ದಾರೆ, ಸಮತಾವಾದಿ ಸಮಾಜದಲ್ಲಿ ಕಾರ್ಮಿಕ ಸಂಘಟನೆಗಳ ಪಾತ್ರದ ಕುರಿತು ವಿವರಿಸುತ್ತಾ ಅವು ಆಡಳಿತೆಯ ಶಾಲೆಗಳು, ಮ್ಯಾನೇಜ್‌ಮೆಂಟಿನ ಶಾಲೆಗಳು ಮತ್ತು ಕಮ್ಯುನಿಸಂನ ಶಾಲೆಗಳೆಂದು ವರ್ಣಿಸಿದ್ದಾರೆ. ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳ ಪರಿಹಾರದಲ್ಲಿ ಕಾರ್ಮಿಕ ಸಂಘಗಳು ಸಕ್ರಿಯ ಪಾತ್ರವಹಿಸುತ್ತಿವೆ.

ಸೋವಿಯತ್ ಸಂವಿಧಾನ ಕಾರ್ಮಿಕ ಸಂಘಗಳಿಗೆ ಬಹಳ ಅಧಿಕಾರ ಕೊಡಮಾಡಿದೆ. ರಾಷ್ಟ್ರದ ಆರ್ಥಿಕ ಸಾಮಾಜಿಕ ಬೆಳವಣಿಗೆಯ ಯೋಜನೆಗಳಲ್ಲಿ ಯೂನಿಯನ್‌ಗಳು ಪಾಲ್ಗೊಳ್ಳುತ್ತಿವೆ.

ಆರ್ಥಿಕ ಬೆಳವಣಿಗೆಯ ಮೂಲಭೂತ ಕರ್ತವ್ಯಗಳು, ಉತ್ಪಾದನೆಯ ಹೆಚ್ಚಳ, ವಿಜ್ಞಾನ, ಮತ್ತು ತಂತ್ರಜ್ಞಾನದಲ್ಲಿ ಸಾಧಿಸಿರುವ ಅತ್ಯಾಧುನಿಕ ಸಾನೆಗಳನ್ನು ಕೈಗಾರಿಕೆಗಳಲ್ಲಿ ಪ್ರಯೋಗ ಮಾಡುವುದರಲ್ಲಿ ಸೋವಿಯತ್ ಕಾರ್ಮಿಕ ಸಂಘಗಳು ಹೆಚ್ಚು ಗಮನ ಹರಿಸುತ್ತಿವೆ. ಈ ಕಾರ್ಯದಲ್ಲಿ ವಿಶಾಲ ಕಾರ್ಮಿಕವರ್ಗ ಕೆಲಸ ಮಾಡುವಂತೆ ಪ್ರೋತ್ಸಾಹಿಸುತ್ತದೆ.

ನಮ್ಮ ದೇಶದಲ್ಲಿ ಆಹಾರ ಸಮಸ್ಯೆ ಗಂಭೀರವಾಗಿದ್ದು ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಕಾರ್ಮಿಕ ವರ್ಗ ಪ್ರೋತ್ಸಾಹ ನೀಡುತ್ತಿದೆ.

ರಾಷ್ಟ್ರದ ಸಾಮಾಜಿಕ ಜೀವವಿಮೆ ಯೋಜನೆಯ ಜವಾಬ್ದಾರಿಯನ್ನು ಸರ್ಕಾರ ಟ್ರೇಡ್ ಯೂನಿಯನ್‌ಗಳಿಗೆ ಒಪ್ಪಿಸಿದೆ. ರಜೆಯ ಸಮಯದಲ್ಲಿ ವಿರಾಮ ಹಾಗೂ ಔಷದೋಪಚಾರ ಪಡೆಯಲಿರುವ ವಿಶ್ರಾಂತಿ ಗೃಹಗಳ ಮೇಲ್ವಿಚಾರಣೆಯ ಸಂಪೂರ್ಣ ಜವಾಬ್ದಾರಿಯನ್ನು ಕಾರ್ಮಿಕ ಸಂಘಗಳಿಗೊಪ್ಪಿಸಲಾಗಿದೆ.

ಜಗತ್ತಿನ ಶಾಂತಿ ಕಾಪಾಡಿ, ಅಣುಯುದ್ಧದ ಭೀತಿ ಇಲ್ಲದಂತೆ ಮಾಡುವುದು ಎಲ್ಲರ ಜವಾಬ್ದಾರಿಯಾಗಿದೆ. ಅಂತರರಾಷ್ಟ್ರೀಯ ಪರಿಸ್ಥಿತಿ ತೀವ್ರಗೊಳ್ಳುತ್ತಿರುವುದು ಎಲ್ಲರನ್ನೂ ಚಿಂತೆಗೊಳಪಡಿಸಿದೆ. ಮಿಲಿಟರಿ ಮೇಲ್ಗೈ ಪಡೆಯಲು ಅಮೇರಿಕದ ಸಾಮ್ರಾಜ್ಯಶಾಹಿಗಳು ಪ್ರಯತ್ನ ನಡೆಸಿದ್ದಾರೆ.

ಶಾಂತಿ ಕಾಪಾಡಲು, ಸಹಕಾರ, ಸಾಮಾಜಿಕ ಪ್ರಗತಿಯನ್ನು ಉತ್ತಮಗೊಳಿಸಲು ಸೋವಿಯೆತ್ ಯೂನಿಯನ್ ಮತ್ತು ಇತರ ಸಮತಾವಾದಿ ದೇಶಗಳೆಲ್ಲ ಸತತ ದುಡಿಯುತ್ತಿವೆ. ಶಸ್ತ್ರಾಸ್ತ್ರಗಳನ್ನು ತಡೆಗಟ್ಟಲು ನಾವು ಹಲವಾರು ಸೂಚನೆಗಳನ್ನು ಮಾಡಿದ್ದೇವೆ. ಜಗತ್ತಿನ ಜನತೆ ಅದನ್ನು ಸ್ವಾಗತ ಮಾಡಿದೆ, ಸಿ.ಐ.ಟಿ.ಯು.ವಿನ 5ನೆಯ ಸಮ್ಮೇಳನ ಯುದ್ಧದ ವಿರುದ್ಧ ಶಾಂತಿಗಾಗಿ ಸೋವಿಯತ್ ಯೂನಿಯನ್ ನಡೆಸುತ್ತಿರುವ ಪ್ರಯತ್ನಕ್ಕೆ ಬೆಂಬಲ ನೀಡಿರುವುದನ್ನು ನೋಡಿ ನಮಗೆ ಬಹಳ ಸಂತೋಷವಾಗಿದೆ. ಕೊನೆಯದಾಗಿ ನಿಮಗೆಲ್ಲ ಹಾರ್ದಿಕ ಸ್ವಾಗತ ನೀಡುತ್ತಾ, ಭಾರತದ ಕಾರ್ಮಿಕ ವರ್ಗಕ್ಕೂ, ಸಿ.ಐ.ಟಿ.ಯು.ವಿಗೂ, ಆರ್ಥಿಕ, ಸಾಮಾಜಿಕ, ಹೋರಾಟದಲ್ಲಿಯೂ, ಜನತೆಯೊಳಗೆ ಶಾಂತಿ-ಗೆಳೆತನ ಕಾಪಾಡುವುದರಲ್ಲಿಯೂ ಯಶಸ್ಸು ಸಿಗಲೆಂದು ಹಾರೈಸುತ್ತೇವೆ.

ಕಾ। ಉಡಮಿಲಾ ಝುಮ್‌ಲಿಯಾನಿಕೋವಾ

ಕಾ। ಚಾಟಿಯಾನಾ ಗೋರ್ಬಟೆಂಕೋ

ಸೋವಿಯೆತ್ ನಿಯೋಗದ ಸದಸ್ಯರು.

ಬಂಟವಾಳ :

ರೈತರ ಸಭೆ

ಬಂಟವಾಳ ತಾಲ್ಲೂಕಿನ ಮಂಚಿ ಗ್ರಾಮದ ರೈತರ ಸಭೆಯೊಂದು ತಾ. 8-4-83ರಂದು ಕೂಂಟೂರಿನಲ್ಲಿ ಕಾ। ವಾಸುಘಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು, ಕೃತರ ಸಮಸ್ಯೆಗಳು ಮತ್ತು ಸಂಘಟನೆಯ ಅವಶ್ಯಕತೆಯ ಕುರಿತು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಯು. ಜನಾರ್ಧನ ನಾಯಕರು ಮಾತನಾಡಿದರು.

ನಂತರ 10 ಜನರ ಸಮಿತಿಯನ್ನು ರಚಿಸಿ ಕೆ. ರಾಮಕೃಷ್ಣ ನಾಯಕರನ್ನು ಅಧ್ಯಕ್ಷರನ್ನಾಗಿಯೂ ಮತ್ತು ಕೆ. ಕೂಸಪ್ಪಯ್ಯ ಕಾಮತ್ ಅವರನ್ನು ಕಾರ್ಯದರ್ಶಿಯರನ್ನಾಗಿಯೂ ಆರಿಸಲಾಯಿತು.

ಚಾಮರಾಜನಗರ :

ಬೀಡಿ ಕೆಲಸಗಾರರ ಸತ್ಯಾಗ್ರಹ

ತಾರೀಖು 8–4–83 ರಂದು ಚಾಮರಾಜನಗರದ ಬೀಡಿ ಕಾರ್ಮಿಕರ ಸಂಘದ ಆಶ್ರಯದಲ್ಲಿ ಸ್ಥಳೀಯ ತಹಶೀಲ್ದಾರರ ಕಛೇರಿಯ ಮುಂದೆ ಬೆಳಿಗ್ಗೆ 11–30 ರಿಂದ 4–30ರವರೆಗೆ ಬೀಡಿ ಕಾರ್ಮಿಕ ಸಂಘದ ಪದಾಧಿಕಾರಿಗಳು ಸತ್ಯಾಗ್ರಹ ನಡೆಸಿದರು. ತಾ. 23–3–83ರಂದು ಸಂಘದ ತೀರ್ಮಾನದಂತೆ ಜ್ಯೋತಿ ಹೋಂ ಇಂಡಸ್ಟ್ರೀಸ್ ಮಾಲೀಕರಿಗೆ, ಎಲೆ ಏವರೇಜು 1500ಕ್ಕೆ ಏರಬಾರದೆಂದೂ, ಎಲೆ ಮತ್ತು ಹೊಗೇಸೊಪ್ಪನ್ನು ಕ್ರಮಪ್ರಕಾರ ತೂಕಮಾಡಿಕೊಡಬೇಕೆಂದು ಒತ್ತಾಯಿಸಿ, 8–4–83ರ ಒಳಗೆ ಉತ್ತರ ನೀಡಬೇಕೆಂದೂ, ತಪ್ಪಿದಲ್ಲಿ ಸತ್ಯಾಗ್ರಹ ನಡೆಸುವುದಾಗಿ ತಿಳಿಸಿ ಪತ್ರ ಬರೆದಿತ್ತು. ಯಾವ ಉತ್ತರವೂ ಸಂಘಕ್ಕೆ ಬಾರದ ಕಾರಣ ಸತ್ಯಾಗ್ರಹವನ್ನು ನಡೆಸಲಾಯಿತು. ಸತ್ಯಾಗ್ರಹ ಪ್ರಾರಂಭವಾದಾಗ ತಹಶೀಲ್ದಾರರನ್ನು ಸಂಘದ ಅಧ್ಯಕ್ಷರಾದ ಎಂ. ಎನ್. ಉಗ್ರಪ್ಪ ಮತ್ತಿತರ ಪದಾಧಿಕಾರಿಗಳು ಭೇಟಿಯಾದರು. ತಹಶೀಲ್ದಾರರವರಿಗೆ ಮಾಲೀಕರಿಂದ ಬಂದಿದ್ದ ಉತ್ತರವನ್ನು ಅವರು ತಿಳಿಸದರು. ಆ ಉತ್ತರದಲ್ಲಿ ಎಲೆ ಏವರೇಜ್ ಬಗ್ಗೆ ಇದುವರೆವಿಗೂ ನಮಗೆ ಯಾವ ದೂರು ಬಂದಿಲ್ಲ. ಕೆಲಸಗಾರರ ಏವರೇಜ್ ಪ್ರಕಾರ ಬೀಡಿ ಒಹಗಿಸುತ್ತಿದ್ದಾರೆ. ಬ್ರಾಂಚ್ ಮಾಲೀಕರು ಕ್ರಮಪ್ರಕಾರ ಬೀಡಿ ಎಲೆ ಹೊಗೆಸೊಪ್ಪನ್ನು ತೂಕಮಾಡಿಕೊಡುತ್ತಿದ್ದಾರೆ ಎಂದು ನಮೂದು ಮಾಡಿದ್ದರು. ಈ ಉತ್ತರ ಸಮಂಜಸವಾದದ್ದಲ್ಲ ಮತ್ತು ನಿಗಸಂಗತಿಯಲ್ಲವೆಂದು ತಹಶೀಲ್ದಾರರವರಿಗೆ ವಿವರಿಸಿ ಧರಣಿ ಸತ್ಯಾಗ್ರಹವನ್ನು ನಡೆಸಿದರು. ಸತ್ಯಾಗ್ರಹ ಪ್ರಾರಂಭವಾಗುವ ಮುನ್ನ ಮತ್ತು ನಂತರ ನಗರದ ಮುಖ್ಯ ಬೀದಿಗಳಲ್ಲಿ ಬೀಡಿ ಕಾರ್ಮಿಕರು ಪ್ರದರ್ಶನ ನಡೆಸಿದರು.

ಈ ಮೇಲೆ ಹೇಳಿದ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯ ಪಡಿಸಲು, ತಾ॥ 10–4–83 ರಂದು, ಬೀಡಿ ಕಾರ್ಮಿಕ ಸಂಘವು, ಕಾ॥ ಎಂ. ಎನ್. ಉಗ್ರಪ್ಪನವರ ನೇತೃತ್ವದಲ್ಲಿ, ರಾಜ್ಯದ ಕಾರ್ಮಿಕ ಮಂತ್ರಿ ಶ್ರೀ ಅಜೀಜ್ ಸೇಠ್ ಅವರಿಗೆ ಚಾಮರಾಜನಗರದ ಪ್ರವಾಸಿ ಮಂದಿರದಲ್ಲಿ ಒಂದು ಮನವಿಯನ್ನು ಸಲ್ಲಿಸಿತು. ಈ ಬೇಡಿಕೆಗಳಲ್ಲಿ ಹಲವಾರು ಪರಿಶೀಲನೆಯಲ್ಲಿದೆ ಎಂದು ಮಂತ್ರಿಗಳು ತಿಳಿಸಿದರು. ಅದೇ ದಿನ, ಬೀಡಿ ಕಾರ್ಮಿಕರಿಗೆ ನಿವೇಶನಗಳ ಹಕ್ಕು ಪತ್ರಗಳನ್ನು ಹಂಚಲು ಸರ್ಕಾರ ವತಿಯಿಂದ ಏರ್ಪಾಡು ಮಾಡಲಾಗಿತ್ತು.

ನಿವೇಶನಗಳ ಹಂಚಿಕೆ ಕ್ರಮಬದ್ಧವಾಗಿಲ್ಲವೆಂದೂ, ಅನೇಕ ಲೋಪದೋಷಗಳಿವೆಯೆಂದೂ ಸಂಘವು ಮಂತ್ರಿಯವರಿಗೆ ತಿಳಿಸಿತು. ಈ ಬಗ್ಗೆ ಪರಿಶೀಲಿಸಿ ಸರಿಪಡಿಸುವುದಾಗಿ ಶ್ರೀ ಅಜೀಜ್ ಸೇಠ್‌ರವರು ಭರವಸೆ ನೀಡಿದರು.

ಉಪನ್ಯಾಸ ಶಿಬಿರ

ದಿನಾಂಕ 9, 10, 11ನೇ ಏಪ್ರಿಲ್ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಜೌರಾದ (ಬಿ) ಶಾಖೆಯವರು ಮೂರು ದಿನಗಳ ಉಪನ್ಯಾಸ ಶಿಬಿರವನ್ನು ಏರ್ಪಡಿಸಿದರು. ಈ ಉಪನ್ಯಾಸ ಶಿಬಿರಕ್ಕೆ ಗುಲ್ಬರ್ಗಾದಿಂದ ಆರ್. ಕೆ. ಹುಡುಗಿಯವರು ಆಗಮಿಸಿದ್ದರು. ತರಬೇತಿ ಶಿಬಿರದ ಉದ್ಘಾಟನೆಯನ್ನು ಸ್ಥಳೀಯ ಹಿಂದಿ 'ದಮನ' ಪತ್ರಿಕೆಯ ಸಂಪಾದಕರಾದ ವಿಶ್ವನಾಥ ಪಾಟೀಲರು ಉದ್ಘಾಟಿಸಿದರು. ಮೂರು ದಿನಗಳ ತರಬೇತಿ ಶಿಬಿರದ ನಂತರ ಸಂಘಟನಾ ಸಮಾವೇಶದಲ್ಲಿ ಸಂಘಟನೆಯ ಬಗ್ಗೆ ಚರ್ಚಿಸಿ ಪದಾಧಿಗಳನ್ನು ಸರ್ವಾನುಮತದಿಂದಆರಿಸಲಾಯಿತು. ಈ ಶಿಬಿರಕ್ಕೆ 40 ಜನ ಪ್ರತಿನಿಧಿಗಳು ಆಗಮಿಸಿದ್ದರು.

ಶಿವಮೊಗ್ಗ :

ಹಿಂದೂ ಮತಾಂಧರ ವರ್ತನೆಗೆ ಖಂಡನೆ

[ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ। ಕೆ. ಚಂದುಕುಟ್ಟಿರವರು ಈ ಕೆಳಗಿನ ಪತ್ರಿಕಾ ಹೇಳಿಕೆ ನೀಡಿದ್ದಾರೆ.]

ನಾನು ತಾ॥ 23–3–1983ರಂದು ಶಿವಮೊಗ್ಗದಲ್ಲಿ ಹಿಂದೆ ನಡೆದ ಹಿಂದೂ ಸಮಾಜೋತ್ಸವ ಸಂದರ್ಭದಲ್ಲಿ ನಡೆದ ಕಹಿ ಅನುಭವಗಳ ಬಗ್ಗೆ ಒಂದು ಪತ್ರಿಕಾ ಹೇಳಿಕೆ ನೀಡಿ ಮಹಾ ಜನಗಳಿಗೆ ತಿಳುವಳಿಕೆ ಕೊಟ್ಟಿದ್ದೆನು. ಮೊನ್ನೆ ತಾ॥ 7-4-83ರಂದು ನಡೆದ ಹಿಂದೂ ಸಮಾಜೋತ್ಸವ ಸಂದರ್ಭದಲ್ಲಿಯೂ ಹಿಂದಿನ ಅನುಭವವೇ ಆಗಿತ್ತು. ಎಷ್ಟೋ ನಿರಪರಾಧಿಗಳು ಆಸ್ಪತ್ರೆ ಸೇರಬೇಕಾಗಿ ಬಂದು, ಅದರಲ್ಲಿ ಪೋಲೀಸರೂ ಸೇರಿದ್ದಾರೆ. ಏಟು ತಿಂದು ಆಸ್ಪತ್ರೆಯಲ್ಲಿ ಇದ್ದವರ ಪೈಕಿ ಸಮಾಜೋತ್ಸವದ ಸಿಬ್ಬಂದಿಗಳು ಯಾರೂ ಇರಲಿಲ್ಲ.

ಕಲ್ಲಿನೇಟಿನಿಂದಲೂ, ಚಪ್ಪಲಿ ಏಟಿನಿಂದಲೂ ಗಾಯಗಳಾಗಿದ್ದರೂ ಸಹನೆ ಕಳೆದುಕೊಳ್ಳದೆ ಅತ್ಯಂತ ಸಂಯಮದಿಂದ ವರ್ತಿಸಿ ಹೆಚ್ಚು ಗಲಭೆಗೆ ಅವಕಾಶವಾಗದಂತೆ ಪ್ರಯತ್ನಿಸಿದ ಪೋಲೀಸರು ಅಭಿನಂದನೆಗೆ ಅರ್ಹರು.

ಒಂದೊಂದು ಹಿಂದು ಸಮಾಜೋತ್ಸವ ಸಂದರ್ಭದಲ್ಲೂ ಸರ್ಕಾರಕ್ಕೆ ತಗಲುವ ವೆಚ್ಚ ಅಪಾರ. (ಅದುವೂ ನಮ್ಮ ಹಣವೆ) ಹಿಂದು ಸಮಾಜೋತ್ಸವ ಮುಖಂಡರುಗಳು ಜನರನ್ನು ಸೇರಿಸಲು ಹೇಳುವುದೊಂದು, ಮಾಡುವುದು ಮತ್ತೊಂದು.

ಹಿಂದು ವಾದಿಗಳು ಹಿಂದುಗಳನ್ನೇ ಅಸ್ಪೃಶ್ಯದಲ್ಲಿ ಇಟ್ಟುಕೊಂಡು ಎಲ್ಲಾ ವಿಧದ ಕಿರುಕುಳಗಳನ್ನು ಕೊಡುತ್ತಿದ್ದಾರೆ, ಕಳೆದ ಉತ್ಸವದ ಅಂಗವಾಗಿ ಒಂದು ಕಡೆ ಡಾ। ಅಂಬೇಡ್ಕರ್ ಮಹಾ ದ್ವಾರ ಎಂದು ಬರೆದಿರುವ ಬೇನರನ್ನು ನೋಡಿದ್ದೆನು. ಇದು ಅಂಬೇಡ್ಕರ್‌ರವರ ಅನುಯಾಯಿಗಳನ್ನು ಆಕರ್ಷಿಸಲು ಮಾಡಿದ ಕುತಂತ್ರವೆಂದು ಹೇಳಬೇಕಾಗಿದೆ. ಡಾ॥ ಅಂಬೇಡ್ಕರ್‌ರವರು ಅಸ್ಪೃಶ್ಯತಾ ನಿವಾರಣಕ್ಕೆ ಪ್ರಯತ್ನಿಸಿ ಅದರ ವಿರುದ್ಧ ಹೋರಾಡಿ ಬೇಜಾರಾಗಿ ಕೊನೆಯಲ್ಲಿ ಅವರ ಅನುಯಾಯಿಗಳೊಂದಿಗೆ ಬೌದ್ಧ ಮತ ಸೇರಬೇಕಾಗಿ ಬಂತು. ಇದು ಸತ್ಯ ಸಂಗತಿ.

ಅಸ್ಪೃಶ್ಯತೆಯನ್ನು ಇನ್ನೂ ಮುಂದುವರಿಸುವ ಧೋರಣೆಯನ್ನಿಟ್ಟುಕೊಂಡಿರುವ ಕಾರಣ ಸಿರಿಗೆರೆ ಶ್ರೀ ಶ್ರೀ ಶ್ರೀ ಸ್ವಾಮಿಗಳು ತಾ॥ 7-4-83ರಂದು ನಡೆದ ಹಿಂದೂ ಸಮಾಜೋತ್ಸವವನ್ನು ಬಹಿಷ್ಕರಿಸಿ ಮಾರ್ಗದರ್ಶನ ಮಾಡಿದ್ದಾರೆ. ಅವರಿಗೆ ನಮ್ಮ ಅಭಿನಂದನೆಗಳು. ಮನುಷ್ಯರನ್ನು ಮನುಷ್ಯರನ್ನಾಗಿ ಕಾಣದೆ ಭಾರತೀಯರೆಲ್ಲಾ ಹಿಂದುಗಳೆಂದು ಘೋಷಣೆ ಕೂಗುವ ಇವರ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗಿರುವುದು ಅತ್ಯವಶ್ಯ.

ಗುಲ್ಬರ್ಗಾ

ಕಾರ್ಲ್‌ಮಾರ್ಕ್ಸ್ ಕುರಿತು ವಿಚಾರ ಸಂಕಿರಣ

ಕಾರ್ಲ್‌ಮಾರ್ಕ್ಸ್‌ರ ಮರಣ ಶತಾಬ್ಧಿಯ ಅಂಗವಾಗಿ ದಿ. 17-4-83 ರಂದು ಗುಲ್ಬರ್ಗಾದಲ್ಲಿ ವಿಚಾರ ಸಂಕಿರಣವೊಂದನ್ನು ಏರ್ಪಡಿಸಲಾಗಿತ್ತು. 'ಜಗತ್ತಿನ ತತ್ವಶಾಸ್ತ್ರಕ್ಕೆ ಮಾರ್ಕ್ಸ್‌ರ ಕೊಡುಗೆ' ಎಂಬ ವಿಷಯದ ಮೇಲೆ ಶ್ರೀ ಸಿ. ವೀರಣ್ಣ ಅವರು ಮಾತನಾಡಿದರು. 'ಮಾರ್ಕ್ಸ್‌ರ ಕ್ರಾಂತಿಕಾರೀ ಹೋರಾಟಗಳು' ಎಂಬ ವಿಷಯದ ಮೇಲೆ ಕಾ। ವಿ. ಎನ್. ಹಳಕಟ್ಟಿ ಹಾಗೂ 'ಮಾರ್ಕ್ಸ್ ಹಾಗೂ ಭಾರತ' ಎಂಬ ವಿಷಯದ ಮೇಲೆ ಶ್ರೀ ಶರದ್ ಪಾಟೀಲ್ ಅವರು ಮಾತನಾಡಿದರು.

ಶಾಸಕರಾದ ಕಾ। ಕೆ. ಬಿ. ಶಾಣಪ್ಪ ರವರು ಅಧ್ಯಕ್ಷತೆ ವಹಿಸಿದ್ದರು.

ಕೇಂದ್ರ ಮುಂಗಡ ಪತ್ರ: ೧೯೮೩-೮೪ ಹೊರಲಾರದ ಕರಭಾರ

(2ನೇ ಪುಟದಿಂದ)

ದಿಂದ ಕ್ಷಯಿಸುವ ಮೂಲಕ ಸರ್ಕಾರದ ವೆಚ್ಚಕ್ಕೆ ಹಣ ಪಡೆಯಲಾಗುತ್ತಿದೆ. ಇದುವೇ ಇಂದಿರಾ ಕಾಂಗ್ರೆಸ್‌ನ ಸಮಾಜವಾದ!

ಬಂಡವಾಳಶಾಹಿಗಳಿಗೆ ರಿಯಾಯಿತಿಗಳು

ಬಂಡವಾಳಶಾಹಿಗಳ, ಮುಖ್ಯವಾಗಿ ಗುತ್ತೇದಾರಿ ಬಂಡವಾಳಶಾಹಿ ಉತ್ಪಾದನೆ ಹೆಚ್ಚಿಸಲು, ರಫ್ತು ಹೆಚ್ಚಿಸಲು, ಲಾಭ ಹೆಚ್ಚಿಸಲು ಈ ವರ್ಷದ ಮುಂಗಡ ಪತ್ರದಲ್ಲಿ ಹಿಂದಿನ ವರ್ಷಗಳಂತೆಯೇ ವಿವಿಧ ರಿಯಾಯಿತಿಗಳನ್ನು ಸೂಚಿಸಲಾಗಿದೆ. ಕಂಪೆನಿಗಳ ಸವಕಲು ಭತ್ತೆ (Depreciation Allowance) ಯನ್ನು ಶೇ. 10 ರಿಂದ 15ಕ್ಕೆ ಏರಿಸಲಾಗಿದೆ. ಅವುಗಳು ಬ್ಯಾಂಕಿನಿಂದ ಪಡೆಯುವ ಸಾಲದ ಮೇಲಿನ ಗರಿಷ್ಠ ಬಡ್ಡಿ ದರವನ್ನು ಶೇ. 19.5 ರಿಂದ 18ಕ್ಕೆ ಇಳಿಸಲಾಗಿದೆ. ಬ್ಯಾಂಕುಗಳು ತಮ್ಮ ಬಡ್ಡಿ ಗಳಿಕೆಯ ಮೇಲೆ ತೆರಬೇಕಾದ ತೆರಿಗೆಯ ದರವನ್ನು ಶೇ. 7 ರಿಂದ ಶೇ. 3.5ಕ್ಕೆ ಇಳಿಸಲಾಗಿದೆ. ಆಸ್ತಿ ಸಂಪತ್ತುಗಳ ಬೆಲೆ ಹೆಚ್ಚಳದಿಂದ ಸಿಗುವ ಲಾಭದ ಮೇಲಿನ ತೆರಿಗೆಯಲ್ಲಿ (Capital gains tax) ಹಲವಾರು ರಿಯಾಯಿತಿಗಳನ್ನು ನೀಡಲಾಗಿದೆ. ಈ ಎಲ್ಲ ಕ್ರಮಗಳಿಂದ ಕೈಗಾರಿಕಾ ಕಂಪೆನಿಗಳಿಗೆ ರೂ. 100 ಕೋಟಿಗಿಂತಲೂ ಹೆಚ್ಚು ಲಾಭ ಗಳಿಕೆ ಆಗಲಿರುವುದು,

ಸರಕಾರ ಪ್ರತಿವರ್ಷವೂ ನೀಡುತ್ತಿರುವ ವಿವಿಧ ರಿಯಾಯಿತಿಗಳನ್ನು ಪಡೆದುಕೊಂಡು ಹತ್ತಾರು ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳು ವರ್ಷಗಟ್ಟಲೆ ತಮ್ಮ ಆದಾಯಗಳ ಮೇಲೆ ತೆರಿಗೆಗಳನ್ನೆಲ್ಲ ಕೊಡಲಿಲ್ಲ ಎಂದು ತ್ತೀಚೆಗೆ ತಿಳಿದುಬಂದಿತ್ತು. ಈ ಆಪಾದನೆಯನ್ನು ಸಲ್ಪ ಹೋಗಲಾಡಿಸಲು ಕಂಪೆನಿಗಳ ವೆಚ್ಚದ ಶೇ. 20 ಅಂಶಕ್ಕೆ ಇನ್ನು ಮುಂದೆ ಆದಾಯ ತೆರಿಗೆ ವಿಧಿಸುವುದಾಗಿಯೂ, ತೆರಿಗೆ ರಿಯಾಯಿತಿಗಳು ಕಂಪೆನಿಗಳ ಪೂರ್ವ ಲಾಭದ ಶೇ. 70ಕ್ಕೆ ಸೀಮಿತವಾಗಿರಬೇಕೆಂದೂ, ಈ ವರ್ಷದ ಮುಂಗಡ ಪತ್ರದಲ್ಲಿ ತಿಳಿಸಲಾಗಿದೆ. ಇದರಿಂದ ರೂ. 100ಕೋಟಿ ಹೊಸ ಆದಾಯ ಬರಲಿದೆ. ಆದರೆ ಸಾವಿರಾರು ಕೋಟಿ ಲಾಭ ಗಿಟ್ಟಿಸುತ್ತಿರುವ ಶ್ರೀಮಂತರ, ಬಂಡವಾಳಶಾಹಿಗಳ ಗುತ್ತೇದಾರಿ ಕಂಪನಿಗಳ ಆದಾಯಗಳ ಮೇಲೆ, ಆಸ್ತಿಗಳ ಮೇಲೆ ಸಾಕಷ್ಟು ತೆರಿಗೆ ಹಾಕುತ್ತಿಲ್ಲ. ಕೈಗಾರಿಕಾ ಸಂಸ್ಥೆಗಳಿಂದ ಸರ್ಕಾರಕ್ಕೆ ರೂ. 2000 ಕೋಟಿ ಅಬಕಾರಿ ತೆರಿಗೆ ಬಾಕಿ ಸಲ್ಲಬೇಕಾಗಿದೆ. ಈ ಕುರಿತು ಹಲವಾರು ಪ್ರಕರಣಗಳು ಸುಪ್ರೀಂ ಕೋರ್ಟಿನಲ್ಲಿವೆ.

ಬಂಡವಾಳಶಾಹಿಗಳ ಗಳಿಕೆಯು ಇಂದು ಹೆಚ್ಚಾಗಿ ವೈಯಕ್ತಿಕ ಹೆಸರಿನಲ್ಲಿರುವುದಿಲ್ಲ, ಧರ್ಮ ಸಂಸ್ಥೆಗಳ-ದತ್ತುಗಳ (Trusts) ಹೆಸರಿನಲ್ಲಿವೆ. ಈ ದತ್ತುಗಳ ಉದ್ದೇಶ ಧರ್ಮದರ್ಶಿಗಳ ಮುಕ್ತೇಸರರ ಕುಟುಂಬದ, ಜಾತಿಯ, ಧರ್ಮದ ಜನರ ಹಿತಾಸಕ್ತಿಗಳನ್ನು ನೋಡಿಕೊಳ್ಳುವುದು. ಇಂತಹ ಹೆಚ್ಚಿನ ಸಂಸ್ಥೆಗಳು ಆದಾಯ ತೆರಿಗೆಯಿಂದ ಮುಕ್ತವಾಗಿವೆ! ಆಸ್ತಿ ಆದಾಯಗಳ ಮೇಲಿನ ತೆರಿಗೆ ತಪ್ಪಿಸಲು ಇದೊಂದು ಉಪಾಯ!

ಗ್ರಾಮೀಣ ಶ್ರೀಮಂತ ರೈತರ ಮತ್ತು ಭೂ ಮಾಲಕರ ಆಸ್ತಿ ಆದಾಯಗಳ ಮೇಲೂ ಪ್ರತ್ಯಕ್ಷ ತೆರಿಗೆಗಳು ಸಾಕಷ್ಟಿರುವುದಿಲ್ಲ. ಹತ್ತು ಎಕರೆಗಿಂತ ಹೆಚ್ಚಿನ ವ್ಯವಸಾಯ ಭೂ ಹಿಡುವಳಿದಾರರಿಗೆ ಆಸ್ತಿ ಮತ್ತು ಆದಾಯದ ಆಧಾರದಲ್ಲಿ ತೆರಿಗೆ ವಿಧಿಸಿದರೆ ಕನಿಷ್ಠ ರೂ 1000 ಕೋಟಿಗಳಾಗಬಹುದು. ಆದರೆ ಸರಕಾರ ಇಂತಹ ಕ್ರಮಕೈಕೊಳ್ಳಲು ಹಿಂಜರಿಯುತ್ತದೆ. ಕಾರಣ, ತನ್ನ ಓಟು ಬ್ಯಾಂಕಿಗೆ ಧಕ್ಕೆ ಆದೀತೆಂಬ ಭಯ!

ಅಳಿಯದ ಸಮಸ್ಯೆಗಳು :

ಇಂದಿರಾ ಕಾಂಗ್ರೆಸ್‌ನ ತೆರಿಗೆ ಧೋರಣೆಯಿಂದಾಗಲೀ, ಆರ್ಥಿಕ ಧೋರಣೆಯಿಂದಾಗಲೀ, ದೇಶದ ಗಂಭೀರ ಆರ್ಥಿಕ ದುಃಸ್ಥಿತಿಯ ಸಮಸ್ಯೆಗಳಾವುದೂ ಪರಿಹಾರವಾಗಲಾರವು. ಬೆಲೆ ಏರಿಕೆ, ಹಣದುಬ್ಬರ ಇನ್ನಷ್ಟೂ ಹೆಚ್ಚುವುದು. ವಿದೇಶಿ ವ್ಯಾಪಾರದಲ್ಲಿ ಕೊರತೆ, ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಗಳಲ್ಲೂ ಸ್ಥಗಿತ, ಆರ್ಥಿಕ ಅಭಿವೃದ್ಧಿಯಲ್ಲಿ ಸ್ಥಗಿತ ಇಳಿಮುಖ, ನಿರುದ್ಯೋಗ ಹೆಚ್ಚಳ, ಇತ್ಯಾದಿ ಸಮಸ್ಯೆಗಳು ಮುಂದಿನ ದಿವಸಗಳಲ್ಲಿ ಇನ್ನಷ್ಟೂ ಭುಗಿಲೇಳುವುವು. ಶ್ರಮಿಕ ವರ್ಗದ, ಜನ ಸಾಮಾನ್ಯರ ಹೋರಾಟಗಳು ಹೆಚ್ಚುವುವು, ಹರಿತವಾಗುವುವು. ರೈಲ್ವೆ ಕಾರ್ಮಿಕರು ಮುಂದಿನ ಜೂನ್ ತಿಂಗಳಲ್ಲಿ ಮುಷ್ಕರ ಹೂಡುವ ಸಿದ್ಧತೆಯಲ್ಲಿದ್ದಾರೆ. ಇತರ ಕೇಂದ್ರ ಸರಕಾರಿ ನೌಕರರುನಾಲ್ಕನೇವೇತನ ಆಯೋಗದ ಹೇರಿಕೆಯನ್ನು ವಿರೋಧಿಸುತ್ತಿದ್ದಾರೆ. ಮಧ್ಯಕಾಲಿಕ ಪರಿಹಾರ ನೀಡಲು ಒತ್ತಾಯಿಸುತ್ತಿದ್ದಾರೆ. ಹೋರಾಟದ ಹಾದಿಯಲ್ಲಿದ್ದಾರೆ. ಬಡರೈತರ, ಕೃಷಿ ಕಾರ್ಮಿಕರ ವ್ಯಾಪಕ ಹೋರಾಟಗಳೂ ನಡೆಯುತ್ತಿವೆ. ಆರ್ಥಿಕ ದುಃಸ್ಥಿತಿಯು ರಾಜಕೀಯ ಅಸ್ಥಿರತೆಯಲ್ಲಿ ಪರಿಯವಸಾನಗೊಳ್ಳುತ್ತಿದೆ: ಆಸ್ತಿ, ಆದಾಯಗಳು ನ್ಯಾಯಯುತವಾಗಿ ಶ್ರಮಿಕ ವರ್ಗಕ್ಕೆ ಮರುವಿತರಣೆಯಾಗಿದೆ, ಬಡತನ, ನಿರುದ್ಯೋಗ ಹೋಗಲಾಡಿಸಲು ಅಸಾಧ್ಯ; ಆರ್ಥಿಕ ಅಭಿವೃದ್ಧಿ, ಸ್ವಾವಲಂಬನೆ ಅಸಾಧ್ಯ.

ದೇಶದ ಕಾರ್ಮಿಕರೇ ಎದ್ದೇಳಿ! ಚರಿತ್ರಾರ್ಹ ಜವಾಬ್ದಾರಿ ಪೂರೈಸಲು ಮುಂದಾಗಿರಿ !

(ಒಂದನೇ ಪುಟದಿಂದ)

ಅತ್ಯಂತ ಬಲಹೀನವಾದ ರೈತ-ಕಾರ್ಮಿಕರ ಚಳುವಳಿ, ದುರ್ಬಲ ಪ್ರಜಾಪ್ರಭುತ್ವ ಆಂದೋಲನದಿಂದಾಗಿ, ಹಳ್ಳಿಯ ಜನತೆ ಗುಲಾಮರಂತೆ ಬಾಳುತ್ತಿದ್ದರೂ ಇಂದಿರಾ ಕಾಂಗ್ರೆಸ್ಸಿನ ಪ್ರಭಾವ ಜಾಸ್ತಿ ಈ ರಾಜ್ಯದಲ್ಲಿ.

ಕೆಲವು ವರ್ಷಗಳ ಹಿಂದೆ ಕಾನ್‌ಪುರ ಜಿಲ್ಲೆಗಿರಣಿ ಕೆಲಸಗಾರರ ಕೆಂಪು ಕೋಟೆಯಾಗಿತ್ತು. ಈಗ ಸಿ.ಐ.ಟಿ.ಯು. ಹೇಳಿಕೊಳ್ಳುವಂತೆ ಶಕ್ತಿಯುಳ್ಳದ್ದಿದ್ದರೂ ತುರ್ತು ಪರಿಸ್ಥಿತಿಯ ದಬ್ಬಾಳಿಕೆಯ ಕಾಲದಿಂದೀಚೆಗೆ ಅದರ ನೇತೃತ್ವದಲ್ಲಿ ರಾಜ್ಯದ ಹಲವಾರು ಕಾರ್ಮಿಕ ಕೇಂದ್ರಗಳಲ್ಲಿ ಧೀರ ಹೋರಾಟಗಳು ನಡೆದಿವೆ. 35 ಸಾವಿರ ಸದಸ್ಯರುಳ್ಳ ಹೋರಾಟದ ಪರಂಪರೆಯ ಸಿ.ಐ.ಟಿ.ಯು. 5ನೇ ಅಖಿಲ ಭಾರತ ಸಮ್ಮೇಳನ ನಡೆಸುವ ಜವಾಬ್ದಾರಿಯನ್ನು ಹೊತ್ತಿದೆ. ಈ ಹೊತ್ತ ಹೊಸ ಜವಾಬ್ದಾರಿಯನ್ನು ಉತ್ತರ ಪ್ರದೇಶದ ಕ್ರಾಂತಿಕಾರಿ ಕಾರ್ಮಿಕ ವರ್ಗದ ಬೆಂಬಲದಿಂದ ರಾಜ್ಯ ಸಿ.ಐ.ಟಿ.ಯು. ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದೆ. ಇಷ್ಟು ಚಿಕ್ಕ ರಾಜ್ಯ ಸಮಿತಿ ಅಖಿಲ ಭಾರತ ಸಮ್ಮೇಳನ ನಡೆಸುವ ಜವಾಬ್ದಾರಿ ಹೊತ್ತಿರುವುದು ವಿಶೇಷವಾಗಿಯೂ ಹೆಮ್ಮೆಯ ಸಂಗತಿ, ಇತರರಿಗೆ ಸ್ಫೂರ್ತಿ ನೀಡುವಂಥಾದ್ದಾಗಿದೆ,

ಸಾಧಾರಣ ಒಂದು ನೂರು ಎಕರೆಯಷ್ಟು ವಿಶಾಲವಾದ "ಬ್ರಿಜೇಂದ್ರ ಸ್ವರೂಪ ಪಾರ್ಕ್" ಕೆಂಪು ಕೋಟೆ ಉತ್ತರ ಪ್ರದೇಶದ ರೈತ-ಕಾರ್ಮಿಕರಿಗಾಗಿ ಹೇವಮಾನವಿಡೀ ದುಡಿದು, ಮಡಿದ ಜನಪ್ರಿಯ ಮುಖಂಡ ಕಾ| ರಾವ್ ಅತ್ರಿಯ್ ಅವರ ಹೆಸರಿಡಿಸಲಾಗಿತ್ತು. ವಿಶಾಲವಾದ ಸಮ್ಮೇಳನದ ಸಭಾಂಗಣಕ್ಕೆ, ಸ್ವಾಗತ ಸಮಿತಿ, ರಿಸೆಪ್ಷನ್, ವೈದ್ಯಕೀಯ ವ್ಯವಸ್ಥೆ, ಸ್ವಯಂ ಸೇವಕರ ಕ್ಯಾಂಪ್, ಚಹಾ-ಕಾಫೀಯುಗಳ ಅಂಗಡಿಗಳು ಒಂದು ಕಡೆ, ಸ್ವಲ್ಪ ದೂರದಲ್ಲಿ ಅಡಿಗೆ ಮನೆ, ಒಂದೇ ಸಲ 800 ಜನರಿಗೆ ಊಟ ನೀಡಲು ವ್ಯವಸ್ಥೆ ಇರುವ ವಿಶಾಲದ ಪೆಂಡಾಲ್, ಮಗ್ಗುಲಲ್ಲೇ ವಿಶಾಲವಾದ ಶ್ಯಾಮಿಯಾನ ನೋಡಬಹುದು. ಅದರ ಎದುರುಗಡೆಯಲ್ಲೇ ಪುಸ್ತಕಗಳ ಸ್ಟಾಲ್; ಆಯುಕ್ತರ ಸೀದಗಳ ಅಂಗಡಿ, ಚಳುವಳಿ-ಹೋರಾಟಗಳ ಪ್ರದರ್ಶನ ಮುಂತಾದ ಸ್ಟಾಲ್ ಕಾಣಬಹುದು.

ಕಾರ್ಲ್‌ಮಾರ್ಕ್ಸ್, ಲೆನಿನ್ನರ ಸುಂದರ ಚಿತ್ರಗಳು, ಕ್ರಾಂತಿಕಾರಿ ಘೋಷಣೆಗಳು, ಕೆಂಪು ಧ್ವಜಗಳು ಪ್ರತಿನಿಧಿಗಳನ್ನು ಸ್ವಾಗತಿಸುತ್ತಿದ್ದವು, ಕಾರ್ಮಿಕರು, ಕೃಷಿ ಕಾರ್ಮಿಕರು, ಎಸ್.ಎಫ್.ಐ. ಯುವಕರನ್ನೊಳಗೊಂಡ ಒಂದು ಸಾವಿರ ಕೆಂಪು ಸಮವಸ್ತ್ರಧಾರಿ ಸ್ವಯಂ ಸ್ವಯಂ ಸೇವಕರು, ಬಿಳಿ ಸೀರೆ ತೊಟ್ಟಿರುವ ಸ್ವಯಂ ಸೇವಿಕೆಯರು ಸಮ್ಮೇಳನದ ಚಟುವಟಿಕೆಗಳನ್ನು ನಿಷ್ಠಾವಂತರಾಗಿ ನಡೆಸುತ್ತಿದ್ದ ದೃಶ್ಯ ಎಲ್ಲರಲ್ಲೂ ಕ್ರಾಂತಿಕಾರಿ ಹರ್ಷವ್ಯದ ಸ್ಫೂರ್ತಿ ತುಂಬುವಂತಿತ್ತು.

ಪಕ್ಕದಲ್ಲೇ ರಾತ್ರಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಸಲು ಸುಂದರವಾದ ಕಲಾಮಂಟಪ ನಿರ್ಮಿಸಲಾಗಿತ್ತು. ತಮ್ಮ ಇತಿಮಿತಿಯಲ್ಲಿ 5ನೇ ಅಖಿಲಭಾರತ ಸಮ್ಮೇಳನಕ್ಕೆ ಏರ್ಪಡಿಸಿರುವ ವ್ಯವಸ್ಥೆಯು ಅತ್ಯಂತ ಸ್ಫೂರ್ತಿದಾಯಕವಾಗಿತ್ತು.

ತಾ| 13 ರಂದು 3 ಗಂಟೆಗೆ ಪ್ರಾರಂಭವಾದ ಬಹಿರಂಗ ಅಧಿವೇಶನದಲ್ಲಿ ಸ್ವಾಗತ ಭಾಷಣ ಮಾಡುತ್ತಾ ಕಾ| ದರ್ಶನಾಯ್ ಸಿಂಗ್ ಅವರು ಕಾನ್ಪುರದ ವೀರ ಹೋರಾಟದ ಹಿನ್ನೆಲೆ ವಿವರಿಸಿದರು. 1857 ರಲ್ಲಿ ಬ್ರಿಟಿಷ ಸಾಮ್ರಾಜ್ಯಶಾಹಿ ವಿರುದ್ಧ ನಡೆದ ದಂಗೆಯದಲ್ಲಿ ಕಾನ್ಪುರ ಅತಿ ಮಹತ್ವದ ಪಾತ್ರ ವಹಿಸಿತ್ತು. ನಾನಾರಾವ್ ಪೇಶ್ವೆ ಮತ್ತು ತಾಂತ್ಯಾಟೋಪಿರವರು ಬ್ರಿಟೀಷರ ವಿರುದ್ಧ ಹೋರಾಡಿದ ವೀರರ ನಗರ ಇದಾಗಿದೆ. ಅಝೀಜಾನಾಬಾಯಿ ಎಂಬ ಒಬ್ಬ ವೇಶ್ಯೆ ತನ್ನ ಜೀವದ ಹಂಗು ತೊರೆದು ನೂರಕ್ಕಿಂತ ಹೆಚ್ಚು ಆಂಗ್ಲರನ್ನು ಕೊಂದುಹಾಕಿದ್ದ ಊರು. ಭಗತ್‌ಸಿಂಗ್, ಚಂದ್ರಶೇಖರ ಅಜಾದ್ ಅವರ ಚಟುವಟಿಕೆಗಳ ಕೇಂದ್ರ ಕಾನ್ಪುರ.

ಬಂಡವಾಳಶಾಹಿ ಶುಲಿಗೆಯ ವಿರುದ್ಧ ಪ್ರಾರಂಭದಿಂದಲೂ ಕಾನ್‌ಪುರದ ಕಾರ್ಮಿಕ ವರ್ಗ ಧೀರೋದ್ಧಾತ ಹೋರಾಟಗಳನ್ನು ನಡೆಸುತ್ತಲೇ ಬಂದಿತ್ತು. ಸ್ವಾತಂತ್ರ್ಯ ಪಡೆದ ನಂತರವೂ ಚರಿತ್ರಾರ್ಹ ಚಳುವಳಿಗಳು ನಡೆದಿವೆ, ಸಿ ಐ ಟಿ ಯು ಸ್ಥಾಪನೆಯಾದ ನಂತರವೂ ಕಾರ್ಮಿಕ ಹೋರಾಟದ ಚರಿತ್ರೆಯಲ್ಲಿ ಕಾನ್‌ಪುರ ತನ್ನದೇ ಆದ ಸ್ಥಾನ ಪಡೆದಿದೆಯೆಂದು ಹೇಳಿದರು.

ಬಟ್ಟೆ, ಸಕ್ಕರೆ, ರಸಾಯನಿಕ ಗೊಬ್ಬರ, ನಾರು, ಕೆಮಿಕಲ್ಸ್ ಮೊದಲಾದ ಕಾರ್ಖಾನೆಗಳ ಕಾರ್ಮಿಕರು ಹೋರಾಟ ನಡೆಸುತ್ತಿರುವ ನಗರ ಕಾನ್‌ಪುರ ಎಂದು ಹೇಳಿ ಸಿ ಐ ಟಿ ಯು ಅಖಿಲ ಭಾರತ ಸಮ್ಮೇಳನ ಕಾನಪುರದಲ್ಲಿ ನಡೆಯಬೇಕೆಂಬ ನಿರ್ಣಯವು ಹಾಗೆಯೇ ಈಗ ಇಲ್ಲಿ ಸಮ್ಮೇಳನ ನಡೆಯುತ್ತಿರುವುದು ಉತ್ತರ ಪ್ರದೇಶದ ಹಾಗೆಯೇ ಕಾನ್‌ಪುರದ ದುಡಿಯುವ ವರ್ಗಕ್ಕೆ ತಮ್ಮ ಸಂಘಟನೆಯನ್ನು ವಿಸ್ತರಿಸಲು, ಬಲಗೊಳಿಸಲು ಹೆಚ್ಚಿನ ಪ್ರೋತ್ಸಾಹ ನೀಡುವಲ್ಲಿ ಸಂಶಯವಿಲ್ಲೆಂದು ಹೇಳಿ, ರಷ್ಯಾ, ಚೀನಾ, ಲಂಕಾ, ಡಬ್ಲ್ಯು. ಎಫ್.ಟಿ.ಯು. ಯುಗೋಸ್ಲಾವಿಯಾ ಹಾಗೆಯೇ ಈ ಸಮ್ಮೇಳನಕ್ಕೆ ಬಂದಿರುವ ಎಲ್ಲ ಪ್ರತಿನಿಧಿಗಳನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿಯವರಾದ ಕಾ|| ರಾಮಮೂರ್ತಿಯವರು ತಮ್ಮ ಸುದೀರ್ಘ ವರದಿಯನ್ನು ಮಂಡಿಸುತ್ತಾ, ಜಗತ್ತಿನಲ್ಲಿ ರೇಗನ್ ಸರಕಾರ ನಡೆಸುತ್ತಿರುವ ಯುದ್ಧ ತಯಾರಿಯನ್ನೂ, ಅದರಿಂದುಂಟಾಗಬಹುದಾದ ಯುದ್ಧದ ಅಪಾಯವನ್ನೂ ವಿವರಿಸಿ, ಜಗತ್ತಿನ ದುಡಿಯುವ ವರ್ಗ ಮತ್ತು ಪ್ರಜಾಪ್ರಭುತ್ವ ಜನತೆ ಅದರ ವಿರುದ್ಧ ನಡೆಸುತ್ತಿರುವ ಚಳುವಳಿಯನ್ನೂ, ಬಂಡವಾಳಶಾಹಿ ಜಗತ್ತಿನ ಹಾಗೆಯೇ ಭಾರತ ದೇಶದಲ್ಲಿಯ ಆರ್ಥಿಕ ಬಿಕ್ಕಟ್ಟನ್ನೂ, ಜನರ ಮೇಲಾಗುತ್ತಿರುವ ಅದರ ಪರಿಣಾಮವನ್ನೂ ತಿಳಿಸಿ ಹೇಳಿ, ಸಿಐಟಿಯು ನೇತೃತ್ವದ ಕಾರ್ಮಿಕ ಸಂಘಟನೆಗಳು ಕಳೆದ ಸಮ್ಮೇಳನದಿಂದೀಚೆಗೆ ದೇಶದಲ್ಲಿ ನಡೆಸಿದ ಹಲವಾರು ಹೋರಾಟಗಳನ್ನೂ, ಅವುಗಳಿಂದಾಗಿ ಕಾರ್ಮಿಕರು ಪಡೆದ ಲಾಭಗಳನ್ನೂ ವಿವರಿಸಿ, ಇನ್ನೂ ಬಲಿಷ್ಠವಾದ ಸಂಘಟನೆ ಬೆಳೆಸಿ ಬಂಡವಾಳಶಾಹಿ ಆರ್ಥಿಕ ನೀತಿಯ ವಿರುದ್ಧ, ದಬ್ಬಾಳಿಕೆಯ ವಿರುದ್ಧ ಹೋರಾಡಲು ತಯಾರಾಗಬೇಕೆಂದು ಕರೆಕೊಟ್ಟರು.

ಸಿ ಐ ಟಿ ಯು ಅಧ್ಯಕ್ಷರಾದ ಕಾ. ಬಿ. ಟಿ. ರಣದಿವೆಯವರು ಮೂರು ಘಂಟೆಗೆ ಸರಿಯಾಗಿ ಕೆಂಪು ಧ್ವಜಾರೋಹಣ ಮಾಡಿದರು.

ಸಿಐಟಿಯು ಸ್ಥಾಪನೆಯಾದ ನಂತರ ಪ್ರಥಮ ಬಾರಿ ರಷ್ಯಾ, ಚೀನಾ, ಸಿಲೋನ್, ಯುಗೋಸ್ಲಾವಿಯಾ ಡಬ್ಲ್ಯೂ. ಎಫ್. ಟಿ. ಯು. ಗಳಿಂದ ಪ್ರತಿನಿಧಿಗಳು ಸಮ್ಮೇಳನಕ್ಕೆ ಬಂದು ಶುಭ ಕೋರಿದರು, ರುಮಾನಿಯಾ, ಕೊರಿಯಾಗಳಿಂದ ಶುಭ ಸಂದೇಶಗಳು ಬಂದಿದ್ದವು.

ಕೊನೆಯ ದಿನವಾದ ಭಾನುವಾರ ಬೃಹತ್ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ರಾಜ್ಯದ ಹಲವಾರು ಭಾಗಗಳಿಂದಲೂ ನೆರೆಯರಾಜ್ಯಗಳಿಂದಲೂ ಮೆರವಣಿಗೆಗೆ ಸಹಸ್ರಾರು ಕಾರ್ಮಿಕರು ಬಂದಿದ್ದರು, ಸಹಸ್ರಾರು ಸಂಖ್ಯೆಯಲ್ಲಿದ್ದ ಕೆಂಪು ಸಮವಸ್ತ್ರ ಧರಿಸಿದ್ದ ಸ್ವಯಂ ಸೇವಕರು ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ಹಿಂದಿನ ದಿನದವರೆಗೆ ಮಳೆಯಲ್ಲಿ ತೊಯ್ದು ಹೋಗಿದ್ದ ಕಾನ್ಪುರ ನಗರವನ್ನು ಸೂರ್ಯಕಿರಣಗಳು ಬೆಳಗೆ ಲವಲವಿಕೆಯನ್ನುಂಟು ಮಾಡಿದ್ದು ಮೆರವಣಿಗೆಗೆ ಸೂಕ್ತವಾಗಿ ಪರಿವರ್ತಿಸಲ್ಪಟ್ಟಿತ್ತು. ಉತ್ಸಾಹ-ತುಂಬಿತ್ತು. ನಂತರ ಬಹಿರಂಗ ಸಭೆಯನ್ನುದ್ದೇಶಿಸಿ ಕಾ| ಬಿ. ರಣದಿವೆ ಕಾ| ಪಿ. ರಾಮಮೂರ್ತಿ ಕಾ. ಸಮರಮುಖರ್ಜಿ ಮುಂತಾದವರು ಮಾತನಾಡಿದರು.

ವರದಿ : ಎನ್...

ಸಂಪಾದಕೀಯ

ಥಿಸಿದ್ದಾರೆ. 1978–79ರಲ್ಲಿ ತನ್ನ ಆಂತರಿಕ ಜಗಳದ ಜೊತೆಯಲ್ಲೇ, ಜನತಾ ಪಾರ್ಟಿಯಲ್ಲಿ ಆರ್. ಎಸ್. ಎಸ್.ನವರ ಪ್ರಮುಖ ಪಾತ್ರದ ಕುರಿತು ಸಿ.ಪಿ.ಐ. (ಎಂ.)ಅಷ್ಟೇ ಅಲ್ಲ, ಜನತಾ ಪಾರ್ಟಿ ಒಳಗಿದ್ದ ಸಮಾಜವಾದಿ ಮತ್ತು ಲೋಕದಳ ಗುಂಪುಗಳು ಸಾಕಷ್ಟು ಆಕ್ಷೇಪ ಎತ್ತಿದೆಯೆಂದೂ, ಮೊರಾರ್ಜಿ ಸರ್ಕಾರ ಕುಸಿದು ಬೀಳಲು ಆಡಳಿತದಲ್ಲಿ ಆರ್. ಎಸ್, ಎಸ್. ಕೈವಾಡ ಪ್ರಮುಖ ಪಾತ್ರವಹಿಸಿತ್ತೆಂದೂ, ಜನತಾ ಪಾರ್ಟಿ ಛಿದ್ರಗೊಂಡು ಬಿ. ಜೆ. ಪಿ. ಸ್ಥಾಪನೆಯಾದಾಗ ಅದರ ಪ್ರಭಾವ ಕುಂದು ಬಂದಿರುವುದನ್ನು ಯಾರೂ ಮರೆಯುವಂತಿಲ್ಲ. ಬಿ. ಜೆ. ಪಿ. ಮುಖಂಡರಾದ ಅಟಲ ಬಿಹಾರಿ ವಾಜಪೇಯಿ, ಅದ್ವಾನಿ ಮೊದಲಾದವರಿಗೆಲ್ಲ ಅಪಾರ ಅಭಿಮಾನವಿದ್ದು, ಅದನ್ನು ಅವರು ಮರೆಮಾಚುತ್ತಿಲ್ಲ. 1982ರಲ್ಲಿ ನಡೆದ ಹರ್ಯಾಣ, ಹಿಮಾಚಲ ಪ್ರದೇಶದ ಚುನಾವಣೆಗಳಲ್ಲಿ ಆರ್. ಎಸ್. ಎಸ್. ಗುಂಪು ಇಂದಿರಾ ಕಾಂಗ್ರೆಸ್ಸಿಗೆ ಬೆಂಬಲ ನೀಡಿರುವ ಸಂಗತಿ ಹಾಗೆಯೇ ಬಹುಗುಣ ಅವರ ವಿರುದ್ಧ ಕೆಲಸ ಮಾಡಿದ್ದಾರೆಂಬ ವಿಷಯ ಎಲ್ಲರಿಗೂ ಗೊತ್ತು. ಹೋದ ವರ್ಷ ನಡೆದ ಕೇರಳದ ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯನ್ನು ಸೋಲಿಸುವ ಉದ್ದೇಶದಿಂದಲೇ ತನ್ನ ಶಕ್ತಿಗೂ ಮೀರಿ ಹೆಚ್ಚಿನ ಸ್ಥಾನಗಳಲ್ಲಿ ಸ್ಪರ್ಧಿಸಿ ಕಾಂಗ್ರೆಸ್ಸಿಯ ವಿಂಕ್ರ ಕೂಟ ಬರೀ 90,000 ಮತಗಳಿಂದ ಅಧಿಕಾರಕ್ಕೆ ಬರುವಂತೆ ಮಾಡಿತ್ತು. ಹೀಗೆ ಆರ್. ಎಸ್, ಎಸ್.ನವರ ಪಾತ್ರ ಸ್ಪಷ್ಟವಾಗಿರುವಾಗ, ಅದನ್ನು ಕಂಡುಹಿಡಿಯಲು ಸುಬ್ಬಯ್ಯನವರ "ದಿವ್ಯ ದೃಷ್ಟಿಗೆ" ಇಷ್ಟು ಕಾಲ ಹಿಡಿಯಿತಲ್ಲಾ. ಅವರ ದಿವ್ಯದೃಷ್ಟಿಯಲ್ಲಿ ಏನೋ ಕೊರತೆಯಿದೆ ಎಂಬುದನ್ನು ಇದು ತೋರ್ಪಡಿಸುತ್ತದಲ್ಲವೇ ?

"ಜಾತಿ, ಜೈನ್ ಸಂಸ್ಕೃತಿಯಲ್ಲಿ" ತನಗೆ ವಿಶ್ವಾಸವಿಲ್ಲ ಎಂದು ಸುಬ್ಬಯ್ಯನವರು ಹೇಳಿ ತನ್ನನ್ನ ಅಧಿಕಾರದಿಂದ ಕೆಳಗಿಳಿಸಲು ಆರ್. ಎಸ್. ಎಸ್. ಗುಂಪು ಈ ಸಂಸ್ಕೃತಿಯನ್ನು ಉಪಯೋಗಿಸಿದೆ ಎಂದು ಆರೋಪ ಹೊರಿಸಿದ್ದಾರೆ. ಸುಬ್ಬಯ್ಯ–ಆಚಾರ್ಯರ ಜಂಗೀ ಕುಸ್ತಿ ಇನ್ನೂ ಏನೇನು ಒಳಗುಟ್ಟುಗಳನ್ನು ಹೊರಚೆಲ್ಲುತ್ತದೋ ವೀಕ್ಷಿಸೋಣ. ಆರ್. ಎಸ್. ಎಸ್. ಹಿಂದೂ ಸಂಸ್ಕೃತಿಯ ಗುಣಮಟ್ಟ ಜನತೆಗೆ ಗೊತ್ತಾಗಲಿ.

ಮೋಪೆಕ್ಸ್ ಕಾರ್ಮಿಕರ ಸಂಘದ ಸ್ಥಾಪನೆ

ಧಾರವಾಡದ ಬಳಿ ಸತ್ತೂರಿನಲ್ಲಿರುವ ವಿಶಾಲಾಕ್ಷಿ ಆಯಿಲ್ ತಂಡ ಪ್ರೋಟೀನ್ ಎಕ್ಸ್‌ಪ್ಯಾಕ್ಸ್ (ಮೋಪೆಕ್ಸ್) ಕಂಪೆನಿಯ ಕಾರ್ಮಿಕರ ಸರ್ವ ಸದಸ್ಯರ ಸಭೆಯು ಕಾ| ವಿ. ಎನ್. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 15–4–1983ರಂದು ಜರುಗಿತು. ಅದರಲ್ಲಿ ಮೋಪೆಕ್ಸ್ ಕಾರ್ಮಿಕರ ಸಂಘವನ್ನು ಸ್ಥಾಪಿಸುವ ಹಾಗೂ ಅದನ್ನು ಸಿ.ಐ.ಟಿ.ಯು.ಗೆ ಸೇರ್ಪಡೆ ಮಾಡುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಸಭೆಯು ಈ ಕೆಳಗಿನ ಪದಾಧಿಕಾರಿಗಳನ್ನು ಹಾಗೂ ಹನ್ನೆರಡು ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾ| ವಿ, ಎನ್. ಹಳಕಟ್ಟಿ (ಅಧ್ಯಕ್ಷರು), ಕಾ| ಎಂ. ಬಿ. ಕಟ್ಟಿ ಕಾ| ಸಿ. ವೈ. ಪಣಿಕರ್ (ಉಪಾಧ್ಯಕ್ಷರು), ಕಾ| ವಿ. ಆರ್. ಜಾಧ (ಕಾರ್ಯದರ್ಶಿ), ಕಾ| ಪರ (ಸಹಕಾರ್ಯದರ್ಶಿ), ಕಾ| ಸುಧೀ ಕುಲಕರ್ಣಿ (ಸಂಘಟನಾ ಕಾರ್ಯದರ್ಶಿ), ಕಾ| ಬೇಬಿಕಟ್ಟಿ (ಖಜಾಂಚಿ) ಹಾಗೂ ಕಾ. ವಿ. ಜಿ. ಕೆ. ನಾಯ (ಕಾನೂನು ಸಲಹೆಗಾರರು).

ಸಭೆಯನ್ನುದ್ದೇಶಿಸಿ ಮಾತನಾ ಕಾ| ವಿ. ಎನ್. ಹಳಕಟ್ಟಿ ಹಾ ಕಾ. ಸುಧೀಂದ್ರ ಕುಲಕರ್ಣಿಯವ ಸಿ.ಐ,ಟಿ.ಯು.ವಿನ ಧ್ಯೇಯ ನಿಯಮಗಳನ್ನು ವಿವರಿಸಿದರು.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24
Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRARAO